IJNRD.ORG ISSN : 2456-4184
INTERNATIONAL JOURNAL OF NOVEL RESEARCH AND DEVELOPMENT (IJNRD) | IJNRD.ORG
An International Open Access, Peer-reviewed, Refereed Journal

# ADHUNIKA VACHANAGALA SAMSKRUTHIKA ADHYAYANA: 1985 RINDA ILLIYAVARGE AYDHA VACHANAKARARANNU ANULAKSHISI ERADU NIBHANDNAGALA AVALOKANA

## ಆಧುನಿಕ ವಚನಗಳ ಸಾಂಸ್ಕೃತಿಕ ಅಧ್ಯಯನ: 1985 ರಿಂದ ಇಲ್ಲಿಯವರೆಗೆ ಆಯ್ದ ವಚನಕಾರರನ್ನು ಅನುಲಕ್ಷಿಸಿ ಎರಡು ನಿಬಂಧಗಳ ಅವಲೋಕನ

**ಕುಮಾರ.ಹೆಚ್.ಎಂ 1**
**ಸಹಾಯಕ ಪ್ರಾಧ್ಯಾಪಕರು**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಡೂರು**
**ಸಂಶೋಧನಾ ವಿದ್ಯಾರ್ಥಿ**
**ನೋಂದಣಿ ಸಂಖ್ಯೆ :23ಖಗಕಊಆಖ53**
**ಶ್ರೀನಿವಾಸ ವಿಶ್ವವಿದ್ಯಾನಿಲಯ**
**ಮಂಗಳೂರು**
ಏಣಟಚಿಡಿಚಿಟ17@ಠಟಚಿಟ.ಛಿಠಟ

**ಮಾರ್ಗದರ್ಶಕರು**

**ಡಾ.ರಾಜಶೇಖರ ಜಮದಂಡಿ 2**
**ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು**
**ಶ್ರೀನಿವಾಸ ವಿಶ್ವವಿದ್ಯಾನಿಲಯ**
**ಮಂಗಳೂರು**

### ಪೀಠಿಕೆ

ಹನ್ನೆರಡನೆಯ ಶತಮಾನವು ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಸುವರ್ಣಾಕ್ಷರಗಳಿಂದ ಬರೆಯಬಹುದಾದ ಕಾಲಘಟ್ಟ. ಕೇವಲ ಅರಮನೆಯಲ್ಲಿ ರಚನೆಯಾಗಿ ರಾಜ, ಪಂಡಿತರಿಗಷ್ಟೇ ಸೀಮಿತವಾಗಿದ್ದ ಸಾಹಿತ್ಯವು ಸಾಮಾನ್ಯ ಜನರ ಬಳಿ ಬಂದಿತು. ಸಮಾಜದ ಕಟ್ಟಕಡೆಯ ವ್ಯಕ್ತಿಯು ಸಾಹಿತ್ಯ ರಚನೆಯಲ್ಲಿ ತೊಡಗಿದನು. ಸಾಮಾನ್ಯ ಜನರು ತಮ್ಮ ಆಡುನುಡಿ, ಅವರ ದೈನಂದಿನ ಮಾತನ್ನೇ ಸಾಹಿತ್ಯ ರಚನೆಯಲ್ಲಿ ಬಳಸಿದರು. ಪಂಡಿತರು ಬಳಸುತ್ತಿದ್ದ ಕನ್ನಡದ ಬದಲಾಗಿ

ಸಾಮಾಜಿಕವಾಗಿ ಕೆಳಸ್ಥರದ ವ್ಯಕ್ತಿಯೂ ತಾನು ತನ್ನ ಮನೆಯಲ್ಲಾಡುತ್ತಿದ್ದ ಕನ್ನಡವನ್ನು ಬಳಸಿದನು. ಸಾಹಿತ್ಯದ ವಸ್ತು, ವಿಷಯ ಮತ್ತು ಭಾಷೆಯೂ ಕೂಡ ಬದಲಾಯಿತು. ಕನ್ನಡ ಸಾಹಿತ್ಯವು ಒಂದು ಮಗ್ಗುಲಿನಿಂದ ಮತ್ತೊಂದು ಮಗಲ್ಗಿನತ್ತ ಹೊರಳಿತು. ಪುರಾಣ, ಕಾವ್ಯಗಳಲ್ಲಿನ ಮುಖ್ಯ ಘಟನೆಗಳ ಸುತ್ತ ರಚನೆಯಾಗುತ್ತಿದ್ದ ಕಾಲ ಹೋಗಿ ಸಮಾಜದಲ್ಲಿ ತಳವೂರಿದ್ದ ಮೂಢನಂಬಿಕೆಗಳನ್ನು ವಿರೋಧಿಸುವ, ಸಮಾಜದಲ್ಲಿನ ಸಾಮಾಜಿಕ ಅಸಮಾನತೆ, ಲಿಂಗ ಅಸಮಾನತೆ, ಮುಂತಾದವುಗಳ ವಿರೋಧಿಸಿ ಸಾಹಿತ್ಯ ರಚಿಸಿದರು. ಓದಿದರೆ ಗದ್ಯವಾಗುವ, ಹಾಡಿದರೆ ಪದ್ಯವಾಗುವ ವಚನಗಳು ಈ ಸಂದರ್ಭದಲ್ಲಿ ಅವತರಿಸಿದವು. ಸಾಮಾಜಿಕ ಕ್ರಾಂತಿಯ ಜೊತೆ ಸಾಹಿತ್ಯಿಕ ಕ್ರಾಂತಿಯು ಘಟಿಸಿತು. ಶರಣರು ತಮ್ಮ ಅನುಭವಗಳನ್ನು, ದಿನನಿತ್ಯ ತಾವು ಕಂಡಂತಹ ಸತ್ಯವನ್ನು ತಮ್ಮ ವಚನಗಳಲ್ಲಿ ಬರೆದರು. ಯಾವುದೇ ಛಂದಸ್ಸನ್ನು ಬಳಸಲಿಲ್ಲ ತಮ್ಮ ಆರಾಧನೆಯ ದೈವವನ್ನು ಅಂಕಿತನಾಮವನ್ನಾಗಿ ಬಳಸಿಕೊಂಡು ಹಲವಾರು ವಚನಗಳನ್ನು ರಚಿಸಿದರು, ಅವುಗಳನ್ನು ಅನುಭವ ಮಂಟಪದಲ್ಲಿ ಪ್ರಸ್ತುತ ಪಡಿಸಿದರು. ಸಾರ್ವಕಾಲಿಕ ಮೌಲ್ಯಗಳನ್ನು ಒಳಗೊಂಡಿರುವ ಈ ವಚನಗಳು ಆಧುನಿಕ ಜಗತ್ತು ಎದುರಿಸುತ್ತಿರುವ ಬಹಳಷ್ಟು ಬಿಕ್ಕಟ್ಟುಗಳಿಗೆ ಪರಿಹಾರವನ್ನು ನೀಡಬಲ್ಲವು. ಪ್ರಸ್ತುತ ನಮ್ಮ ಸಮಾಜದಲ್ಲಿರುವ ಬಹಳಷ್ಟು ಸಮಸ್ಯೆಗಳಿಗೆ ಪರಿಹಾರವನ್ನು ನೀಡಬಲ್ಲವು. ನವೋದಯ ಕನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಕಥೆ, ಕಾದಂಬರಿ, ನಾಟಕ, ಗದ್ಯ, ಕಾವ್ಯ, ಪ್ರವಾಸ ಸಾಹಿತ್ಯ, ಆತ್ಮ ಚರಿತ್ರೆ, ಜೀವನ ಚರಿತ್ರೆ ಮುಂತಾದ ಬಗೆಯ ಪ್ರಕಾರಗಳ ಜೊತೆಯಲ್ಲಿ ವಚನ ಸಾಹಿತ್ಯವನ್ನು ಒಳಗೊಂಡಿದೆ. ಬಹಳಷ್ಟು ಆಧುನಿಕ ವಚನಗಳನ್ನು ರಚಿಸಿದ್ದಾರೆ ಕವಿಗಳು ಆಧುನಿಕ ವಚನಗಳು ಹನ್ನೆರಡನೆಯ ಶತಮಾನದ ವಚನಗಳಿಗಿಂತ ಭಿನ್ನವಾಗಿವೆ. ಕೆಲವು ಕವಿಗಳು ಗದ್ಯದ ಮಾದರಿಯಲ್ಲಿ ವಚನಗಳನ್ನು ರಚಿಸಿದ್ದಾರೆ. ವಸ್ತು ವಿಷಯಗಳು ಕೂಡ ಆಧುನಿಕ ಸಮಾಜವು ಎದುರಿಸುತ್ತಿರುವ ಭಿನ್ನವಾದ ಸಮಸ್ಯೆಗಳನ್ನು ವಚನದ ವಸ್ತುವಾಗಿ ಆಯ್ದುಕೊಂಡು ಬಹಳಷ್ಟು ವಚನಗಳನ್ನು ರಚಿಸಿದ್ದಾರೆ. ಇಪ್ಪತ್ತನೆಯ ಶತಮಾನದಲ್ಲಿ ರಚನೆಯಾದ ವಿವಿಧ ವಚನಗಳನ್ನು ತಮ್ಮ ನಿಬಂಧದ ವಿಷಯವನ್ನಾಗಿ ಆಯ್ದುಕೊಂಡು ಅದಕ್ಕೆ ಒಂದು ಚೌಕಟ್ಟನ್ನು ಕೊಡುವ ಕೆಲಸವನ್ನು ಪ್ರೀತಿ ಶುಭಚಂದ್ರರವರು ಮಾಡಿದ್ದಾರೆ. ಈ ಲೇಖನದಲ್ಲಿ ಅವರ **ಇಪ್ಪತ್ತನೇ ಶತಮಾನದ ವಚನ ಸಾಹಿತ್ಯ: ಒಂದು ಅಧ್ಯಯನ** ಎಂಬ ಪಿ.ಹೆಚ್ ಡಿ ಮಹಾ ಪ್ರಬಂಧದವನ್ನು ನಾನು ನನ್ನ ಪೂರ್ವ ಅಧ್ಯಯನ ಸಮೀಕ್ಷೆಗೆ ಒಳಪಡಿಸಿದ್ದೇನೆ. ಅದರ ಜೊತೆಗೆ ಹಣಮಂತ ಭೀಮಣ್ಣಾ ಇವರ "ಹೈದಾಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರು" ಎನ್ನುವ ಮತ್ತೊಂದು ನಿಬಂಧವನ್ನು ಈ ಸಂದರ್ಭದಲ್ಲಿ ವಿಶ್ಲೇಷಿಸುವ ಕೆಲಸ ಈ ಲೇಖನದ್ದಾಗಿದೆ.

**ಇಪ್ಪತ್ತನೇ ಶತಮಾನದ ವಚನ ಸಾಹಿತ್ಯ: ಒಂದು ಅಧ್ಯಯನ** ಎಂಬ ಪ್ರಬಂಧವನ್ನು ಡಾ.ಹಾಮಾನಾ ಅವರ ಮಾರ್ಗದರ್ಶನದಲ್ಲಿ **ಪ್ರೀತಿ ಶುಭಚಂದ್ರ**ರವರು ಮೈಸೂರು ವಿವಿಗೆ ತಮ್ಮ ಪಿ.ಹೆಚ್.ಡಿ ಪದವಿಗಾಗಿ 1988ರಲ್ಲಿ ಮಂಡಿಸಿದ್ದಾರೆ. ಸುಮಾರು 312 ಪುಟಗಳಿರುವ ಈ ಪ್ರಬಂಧವು ಆಧುನಿಕ ವಚನ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಬಹಳ ಉತ್ತಮ ಮಾಹಿತಿಯನ್ನು ನೀಡುತ್ತದೆಯಲ್ಲದೆ ಬಹಳ ಸವಿವರವಾದ ಮಾಹಿತಿಯನ್ನು ಒದಗಿಸುವ ಈ ಕೃತಿಯನ್ನು ಐದು ಅಧ್ಯಾಯಗಳಾಗಿ ವಿಭಾಗಿಸಿದ್ದಾರೆ. ಮೊದಲ ಅಧ್ಯಾಯವು ಈ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಒಳಗೊಂಡಿದೆ. ಎರಡನೇ ಅಧ್ಯಾಯವು ಇಪ್ಪತ್ತನೇ ಶತಮಾನದ ವಚನ ಸಾಹಿತ್ಯದ ಆಶಯಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುವುದು. ಇದು ಎರಡು ಉಪ ಅಧ್ಯಾಯಗಳನ್ನು ಹೊಂದಿದ್ದು ಮೊದಲನೆಯದರಲ್ಲಿ ಧಾರ್ಮಿಕ ಆಶಯವನ್ನು ಎರಡನೆಯದರಲ್ಲಿ ಸಾಮಾಜಿಕ ಆಶಯವನ್ನು ವಿವರಿಸಿರುವರು. ನಾಲ್ಕನೇ ಅಧ್ಯಾಯವು ಇಪ್ಪತ್ತನೇ ಶತಮಾನದ ವಚನಗಳ ರಚನಾ ವಿನ್ಯಾಸವಾಗಿದ್ದು ಇದರಲ್ಲಿ ನಾಲ್ಕು ಉಪ ಅಧ್ಯಾಯಗಳಿದ್ದು ಒಂದು, ಎರಡು, ಮೂರು ಮತ್ತು ನಾಲ್ಕು ಇವುಗಳು ಅನುಕ್ರಮವಾಗಿ ವಚನಗಳ ರಚನಾ ವಿನ್ಯಾಸದ ಹಿನ್ನೆಲೆ, ಸಾಂಪ್ರದಾಯಿಕ ವಚನಗಳ ರಚನಾ ವಿನ್ಯಾಸ, ಪ್ರಯೋಗಾತ್ಮಕ ವಚನಗಳ ರಚನಾ ವಿನ್ಯಾಸ ಮತ್ತು ಗದ್ಯಗೀತಾತ್ಮಕ ವಚನಗಳ ರಚನಾ ವಿನ್ಯಾಸ ಎಂಬುದಾಗಿಯೂ ವಿಭಾಗಿಸಿದ್ದಾರೆ. ಐದನೆಯ ಅಧ್ಯಾಯದಲ್ಲಿ ಇಪ್ಪತ್ತನೇ ಶತಮಾನದ ವಚನಗಳ ನೆಲೆ-ಬೆಲೆ ಎಂಬುದಾಗಿಯೂ ವಿಭಾಗಿಸಿದ್ದಾರೆ. ಕೊನೆಯದಾಗಿ ಉಪಸಂಹಾರದಲ್ಲಿ ಅನಬಂಧಗಳಿದ್ದು ಇವುಗಳಲ್ಲಿ ವಚನಕಾರರು ಮತ್ತು ಅವರ ವಚನಗಳ ಸಂಕಲನಗಳು, ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡ ವಚನಗಳು, ಅಪ್ರಕಟಿತ ವಚನಗಳು ಮತ್ತು ಪರಾಮರ್ಶನ ಗ್ರಂಥಗಳ ವಿವರವಿದೆ.

ವಚನಗಳು ಹನ್ನೆರಡನೆಯ ಶತಮಾನದಲ್ಲಿ ಕಂಡುಬಂದಂತಹ ಕನ್ನಡ ಸಾಹಿತ್ಯದ ವಿಶಿಷ್ಟರೂಪವಾಗಿದೆ. ಶರಣರ ಅನುಭವದಿಂದ ಮೂಡಿಬಂದ ಈ ವಚನಗಳು ಅಂದಿನ ಸಾಮಾಜಿಕ ತಾರತಮ್ಯವನ್ನು ನೇರವಾಗಿ ಖಂಡಿಸಿದವು. ತದನಂತರ ವಚನಗಳು ಯಾವ ಕಾಲಘಟ್ಟದಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗಿಲ್ಲ. ತದನಂತರ ಹೊಸಗನ್ನಡ ಸಾಹಿತ್ಯ ಕಾಲಘಟ್ಟದಲ್ಲಿ ರಚನೆಯ ದೃಷ್ಟಿಯಿಂದ ಭಿನ್ನತೆಯನ್ನು ಹೊಂದಿರುವ ಆಧುನಿಕ ವಚನಗಳನ್ನು ಬಹಳಷ್ಟು ಜನ ಕವಿಗಳು ಇಪ್ಪತ್ತು ಸಾವಿರಕ್ಕೂ ಮೀರಿದ ವಚನಗಳನ್ನು ರಚಿಸಿದ್ದಾರೆ. ಅವುಗಳನ್ನು ವಿಶ್ಲೇಸುವ ಕೆಲಸವನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕಿದೆ. ಅಂತಹ ಕೆಲಸವನ್ನು ಡಾ.ಪ್ರೀತಿ ಶುಭಚಂದ್ರರವರು ಮಾಡಿದ್ದಾರೆ. ಆಧುನಿಕ ವಚನಗಳನ್ನು ಮತ್ತು ಆಧುನಿಕ ವಚನಕಾರರನ್ನು ನಮಗೆ ಪರಿಚಯಿಸುವ ಕೆಲಸವನ್ನು ತಮ್ಮ ಈ ಕೃತಿಯಲ್ಲಿ ಮಾಡಿದ್ದಾರೆ. ಕೃತಿಯ ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿಯಲ್ಲಿ ಅದನ್ನು ನಮಗೆ ಸ್ಪಷ್ಟವಾಗಿ ವಿವರಿಸಿದ್ದಾರೆ. ಅದುವರೆಗಿನ ವಚನಗಳ ಅಧ್ಯಯನದ ಸ್ವರೂಪವನ್ನು ಈ ರೀತಿಯಲ್ಲಿ ವಿಂಗಡಿಸಿದ್ದಾರೆ.

1. ಶರಣ ವಚನಗಳ ಅಧ್ಯಯನದ ವ್ಯಾಪ್ತಿಯಲ್ಲಿಯೇ ಪ್ರಾಸಂಗಿಕವಾಗಿ ಆಧುನಿಕ ವಚನಗಳ ಬಗೆಗೆ ಕಂಡುಬರುವ ವಿವರಣೆ

2. ಆಧುನಿಕ ವಚನಕಾರರ ವಚನಕೃತಿಗಳಿಗೆ ಬರೆಯುವ ಮುನ್ನುಡಿ ಬರೆಯುವ ಯತ್ನದಲ್ಲಿ ಆಯಾ ವಚನಕಾರರ ಪ್ರಯತ್ನದ ಮೌಲ್ಯಮಾಪನದೊಂದಿಗೆ ಒಟ್ಟಾರೆಯಾಗಿ ಆಧುನಿಕ ವಚನಗಳ ಬಗೆಗೆ ನಡೆಸಲಾದ ವಿವೇಚನೆ

3. ನಿರ್ದಿಷ್ಟ ಆಧುನಿಕ ವಚನ ಸಂಕಲನವನ್ನು ಕುರಿತ ವಿಮರ್ಶಾ ಲೇಖನ

ಈ ರೀತಿಯಾಗಿ ಅವರು ತಮ್ಮ ಅಧ್ಯಯನದ ಸ್ವರೂಪವನ್ನು ಗುರುತಿಸಿದ್ದಾರೆ. 12ನೇ ಶತಮಾನದ ವಚನಗಳಿಗೆ ಅಧ್ಯಯನದ ವ್ಯಾಪ್ತಿ ದೊರಕಿದ್ದರೆ 20 ನೇ ಶತಮಾನದ ವಚನಗಳಿಗೆ ಆ ವ್ಯಾಪ್ತಿಯೂ ಇನ್ನೂ ಸಿಕ್ಕಿಲ್ಲ. ಆಧುನಿಕ ವಚನಗಳ ಸ್ವರೂಪವನ್ನು ಕುರಿತಂತೆ ಮಹತ್ವದ ಮುನ್ನುಡಿ, ಲೇಖನಗಳನ್ನು ಡಾ.ಹಾಮಾನಾರವರು ಹೇಳಿರುವ " ಈ ಆಧುನಿಕ ವಚನ ಸಾಹಿತ್ಯ ಮೈದಾಳಿರುವ ರೀತಿ, ಅದರ ಮುಖ್ಯ ಒಲವು ನಿಲುವುಗಳು ಪ್ರವೃತ್ತಿಗಳು ವಿಸ್ತಾರವಾದ ಪ್ರತ್ಯೇಕ ಅಧ್ಯಯನಕ್ಕೆ ಅರ್ಹವಾಗಿವೆ" ಎಂಬ ಹೇಳಿಕೆಯನ್ನು ದಾಖಲಿಸಿರುವವರು. ಈ ನಿಬಂಧದಲ್ಲಿ 'ವಚನ ಪ್ರಕಾರ' ವನ್ನು ಕುರಿತು ವಿಶ್ಲೇಷಣೆಯೊಂದಿಗೆ ಆಧುನಿಕ ವಚನಗಳ ಮೌಲ್ಯ ಮಾಪನದ ಪ್ರಯತ್ನವನ್ನು ಮಾಡಿದ್ದಾರೆ. ಆಧುನಿಕ ವಚನಗಳ ಆಶಯ ಮತ್ತು ರಚನಾ ವಿನ್ಯಾಸಸ ದೃಷ್ಟಿಯಿಂದ ಆಧುನಿಕ ವಚನಗಳು ಪ್ರಕಟಿಸುವ ವೈಶಿಷ್ಟ್ಯ ಇತಿ–ಮಿತಿಗಳ ಕುರಿತ ಮೌಲ್ಯಮಾಪನವನ್ನು ತಾವು ಕೈಗೊಂಡಿದ್ದೇನೆ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

## ನಿಬಂಧದ ಸ್ವರೂಪ

ಈ ನಿಬಂಧದ ಎರಡನೇ ಆಧ್ಯಾಯದಲ್ಲಿ ಇದನ್ನು ಸ್ಪಷ್ಟವಾಗಿ ವಿವರಿಸದ್ದಾರೆ. ಶರಣರ ವಚನಗಳು ಹಾಗೂ ನವೋದಯ ಸಾಹಿತ್ಯದ ಚಾರಿತ್ರಿಕ ಸಂದರ್ಭ, ಆಶಯಗಳನ್ನು ಆಧುನಿಕ ವಚನಗಳ ಹಿನ್ನೆಲೆಯನ್ನು ಚರ್ಚಿಸಿರುವರು. ಆಧುನಿಕ ವಚನಗಳ ಹಿನ್ನಲೆಯ ವಿವೇಚನೆಯು: ಹೊಸಗನ್ನಡ ಸಾಹಿತ್ಯ ಅಧ್ಯಯನದ ಆರಂಭ ಮತ್ತು ವಚನಗಳ ಅಧ್ಯಯನವನ್ನು ನಿಯಂತ್ರಿಸಿದ ನವೋದಯದ ಪ್ರಧಾನ ಆಶಯಗಳನ್ನು ಮುಖ್ಯವಾಗಿಟ್ಟುಕೊಂಡಿದ್ದಾರೆ. ನವೋದಯ ಆಶಯಗಳ ಚೌಕಟ್ಟಿನಲ್ಲಿ ಆಧುನಿಕ ವಚನಗಳು ಪ್ರಕಟಿಸಿರುವ ಸ್ವರೂಪದೊಂದಿಗೆ ತೌಲನಿಕವಾಗಿ ವಿವೇಚಿಸುವ ಪ್ರಯತ್ನವನ್ನು ಮಾಡಿದ್ದಾರೆ. ನಂತರದ ಆಧ್ಯಾಯಗಳಲ್ಲಿ ಆಧುನಿಕ ವಚನಗಳ ಆಶಯ ಹಾಗೂ ರಚನಾ ವಿನ್ಯಾಸವನ್ನು ನಿರ್ಣಯಿಸುವ ಬಗೆಯನ್ನು ಉಳಿದ ಆಧ್ಯಾಯಗಳಲ್ಲಿ ಪರಿಶೀಲನೆ ಮಾಡಿದ್ದಾರೆ. ಆಧುನಿಕ ವಚನಗಳ ಆಶಯವನ್ನು ಧಾರ್ಮಿಕ ಮತ್ತು ಸಾಮಾಜಿಕ ಎಂಬ ಎರಡು ಉಪವಿಭಾಗಗಳಲ್ಲಿ ವಿವೇಚಿಸಿದ್ದಾರೆ.

ಧಾರ್ಮಿಕ ಆಶಯಗಳು: ಭಾರತದ ನವೋದಯದ ಸಂದರ್ಭದಲ್ಲಿ ಕಂಡು ಬಂದ 'ಮಾನವ ಕೇಂದ್ರಿತ ವ್ಯಕ್ತೀಕರಣ' ಎಂಬ ಪರಿಕಲ್ಪನೆಯು ಆಧುನಿಕ ವಚನಕಾರರ ವಚನಗಳಲ್ಲಿ ವ್ಯಕ್ತಗೊಂಡ ಬಗೆಯನ್ನು ಸೂಕ್ತ ಉದಾಹರಣೆಗಳ ಮೂಲಕ ವಿಶದಪಡಿಸಿದ್ದಾರೆ.

ಸಾಮಾಜಿಕ ಆಶಯಗಳು: ಸಾಮಾಜಿಕವಾಗಿ, ಶಿವಶರಣರ ರಚನೆಗಳಿಗಿರುವ ಸೈದ್ಧಾಂತಿಕ ಚೌಕಟ್ಟಿನಿಂದ ಭಿನ್ನವಾಗಿ ನಿಂತ ಆಧುನಿಕ ವಚನಗಳ ಸಾಮಾಜಿಕ ಆಶಯವನ್ನು ಇಲ್ಲಿ ವಿವರಿಸಲಾಗಿದೆ. ಸಾಮಾಜಿಕ ಆಶಯಗಳೊಂದಿಗೆ ವ್ಯಕ್ತಿಕೇಂದ್ರಿತ ಪ್ರಜ್ಞೆಯ ಫಲವಾಗಿ ರೂಪುಗೊಂಡ ಧರ್ಮನಿರಪೇಕ್ಷ ಆಶಯವೂ ಕೂಡ ಹೇಗೆ ಆಧುನಿಕ ವಚನಗಳ ಸಾಮಾಜಿಕ ಆಶಯವನ್ನು ರೂಪಿಸುವಲ್ಲಿ ಭಾಗಿಯಾಗುತ್ತದೆ ಎಂಬ ಅಂಶಕ್ಕೆ ಒತ್ತು ನೀಡಿದ್ದಾರೆ. ನವೋದಯದ ತಾತ್ವಿಕ ಚೌಕಟ್ಟಿನ ಜೊತೆಗೆ ಪ್ರಗತಿಶೀಲ, ನವ್ಯ, ಬಂಡಾಯ ಸಾಹಿತ್ಯ ಚಳುವಳಿಗಳ ಆಶಯದ ಅಭಿವ್ಯಕ್ತಿಯ ಮೇಲೆ ಬೀರಬಹುದಾದ ಪ್ರಭಾವ, ಪ್ರೇರಣೆಗಳ ಸಾಧ್ಯಾಸಾಧ್ಯತೆಗಳನ್ನು ವಚನ ಸಾಹಿತ್ಯ ಪ್ರಕಾರವೆಂದು ಚರ್ಚಿಸುವಾಗ ಆಧುನಿಕ ವಚನಗಳ ರಚನಾ ವಿನ್ಯಾಸದ ಅಧ್ಯಯನದ ಸೌಲಭ್ಯದ ದೃಷ್ಟಿಯಿಂದ ಅವುಗಳನ್ನು

1 ಸಾಂಪ್ರದಾಯಿಕ ವಚನಗಳ ರಚನಾ ವಿನ್ಯಾಸ

2 ಪ್ರಯೋಗಾತ್ಮಕ ವಚನಗಳ ರಚನಾ ವಿನ್ಯಾಸ

3 ಗದ್ಯಗೀತಾತ್ಮಕ ವಚನಗಳ ರಚನಾ ವಿನ್ಯಾಸ

ಎಂಬ ರೀತಿಯಲ್ಲಿ ವಿಭಾಗಿಸಿಕೊಂಡಿರುವರು

## ನಿಬಂಧದ ವ್ಯಾಪ್ತಿ

ಇಪ್ಪತ್ತನೆಯ ಶತಮಾನದ ಪೂರ್ವಭಾಗದಲ್ಲಿ ಆಧುನಿಕ ವಚನಗಳ ರಚನೆಯಾಗಿರುವುದು ಕಂಡುಬರುತ್ತದೆ. ಕಾಲಮಾನದ ದೃಷ್ಟಿಯಿಂದ ಪ್ರಥಮ ವಚನಕಾರ ಯಾರು ಎಂಬ ವಿಷಯ ಚರ್ಚಾಸ್ಪದವಾಗಿದೆ. 1973ರಲ್ಲಿ 'ರಂಗಯ್ಯನ ವಚನಗಳು' ಎಂಬ ಶಿರೋನಾಮೆಯನ್ನು ಉಳ್ಳ ರಚನೆಗಳನ್ನು 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರಕಟಿಸಿದುದಾಗಿ ಹಾಗೂ 1925ನೇ ಇಸವಿ ಅಕ್ಟೋಬರ್ ತಿಂಗಳನಲ್ಲಿ ತಮ್ಮ ಪ್ರಥಮ ವಚನ ಬರೆದುದಾಗಿ ರಂಗಣ್ಣನವರು ಹೇಳಿಕೊಂಡಿದ್ದಾರೆ. ಆದರೆ ಬೇಂದ್ರೆಯವರು ರಂಗಣ್ಣನಿಗಿಂತ ಮೊದಲ ವಚನಕಾರರಾಗಿದ್ದಾರೆ ಎಂಬುದನ್ನು ಈ ಕೃತಿಯಲ್ಲಿ ಹೇಳಿದ್ದಾರೆ. ಬೇಂದ್ರೆಯವರ 'ಕರುಳಿನ ವಚನಗಳು' ಜಯ ಕರ್ನಾಟಕದಲ್ಲಿ 1931ರಲ್ಲಿ ಪ್ರಕಟವಾದರೂ ಅದನ್ನು ಪೂರ್ಣಗೊಳಿಸಿದ್ದು 1924ರಲ್ಲಿಯೇ ಎಂಬುದಾಗಿ ಬೇಂದ್ರೆಯವರೇ ಹೇಳಿದ್ದಾರೆ. ಬೇಂದ್ರೆಯವರ ನಂತರ ತಿರುಮಲೆ ತಾತಾಚಾರ್ಯ ಶರ್ಮರವರು 1925ರಲ್ಲಿ' ದೇಶೀಯ ವಿದ್ಯಾಶಾಲಾ ಪತ್ರಿಕೆ'ಯಲ್ಲಿ ವಚನಗಳನ್ನು ಬರೆದಿದ್ದಾರೆ. ಕುವೆಂಪು, ಜಚನಿ, ಎಮ್.ಎನ್ ಕಾಮತ್, ದಿವಾಕರರು, ಸಂಗಮೇಶ ಹಂಡಗಿ ಮುಂತಾದವರು ಬರೆದಿದ್ದಾರೆ. ಅಧ್ಯಯನದ ಸೌಲಭ್ಯದ ದೃಷ್ಟಿಯಿಂದ 1980ರವರೆಗೆ ಪ್ರಕಟವಾದ ಮಹತ್ವದ ವಚನಗಳನ್ನು ಈ ಅಧ್ಯಯನದ ವ್ಯಾಪ್ತಿಯೊಳಗೆ ತೆಗೆದುಕೊಂಡಿದ್ದಾರೆ. ಇದಿಷ್ಟು ಈ ಕೃತಿಯ ಮೊದಲ ಅಧ್ಯಾಯದಲ್ಲಿ ಇರುವ ಸಂಕ್ಷಿಪ್ತ ವಿವರವಾಗಿದೆ. ಅಧ್ಯಾಯದ ಕೊನೆಯಲ್ಲಿ ಅಡಿ ಟಿಪ್ಪಣಿಗಳನ್ನು ನೀಡಿದ್ದಾರೆ.

ಈ ನಿಬಂಧದ ಎರಡನೆಯ ಅಧ್ಯಾಯವು 'ಇಪ್ಪತ್ತನೇ ಶತಮಾನದ ವಚನಸಾಹಿತ್ಯದ ಹಿನ್ನೆಲೆ' ಎಂಬ ಶೀರ್ಷಿಕೆಯನ್ನು ಹೊಂದಿದೆ. ನವೋದಯದ ಸಂದರ್ಭದಿಂದ ಇಲ್ಲಿಯವರೆಗೆ ರವನೆಯಾಗುತ್ತಿರುವ ವಚನಗಳನ್ನು ಆಧುನಿಕ ವಚನಗಳೆಂದು ಕರೆಯಬಹುದು. ಈ ವಚನಗಳ ಆಧುನಿಕತೆಯ ಸ್ವರೂಪವನ್ನು ನಿರ್ವಚನಿಸಿಕೊಳ್ಳಲು ಅವುಗಳ ಹಿಂದಿನ ಪ್ರಭಾವ ಪ್ರೇರಣೆಯ ಎರಡು ನೆಲೆಗಳನ್ನು ಗುರುತಿಸಿದ್ದಾರೆ. ಅವು ಈ ಕೆಳಗಿನಂತಿವೆ.

1. ವಿಶಿಷ್ಟ ಅಭಿವ್ಯಕ್ತಿ ಮಾಧ್ಯಮವಾದ 12ನೇ ಶತಮಾನದ ಶಿವಶರಣರ ವಚನ ಪರಂಪರೆಯ ಹಿನ್ನೆಲೆ.
2. ಹೊಸಗನ್ನಡ ನವೋದಯ ಸಾಹಿತ್ಯದ ಪ್ರಧಾನ ಆಶಯಗಳ ಹಿನ್ನೆಲೆ.

ಅಧ್ಯಯನದ ಅನುಕೂಲಕ್ಕೋಸ್ಕರವಾಗಿ ಹೀಗೆ ಮಾಡಿಕೊಂಡಿದ್ದಾರೆ. ಸುಮಾರು 23 ಪುಟಗಳಲ್ಲಿ ಇದರ ವಿವರಣೆಯಿದೆ. ಹೊಸಯುಗದ ವಚನಗಳ ಹಿಂದೆ ಇರಬಹುದಾದ ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಒತ್ತಡಗಳ ಸ್ವರೂಪವನ್ನು ವಿವರಿಸಿದ್ದಾರೆ. 20ನೇ ಶತಮಾನದ ವಚನಗಳು 12ನೇ ಶತಮಾನದ ವಚನಕಾರರ ವಚನ ಪರಂಪರೆಯ ಮುಂದುವರಿಕೆಯೇ ? ಶಿವಶರಣ ವಚನಗಳಗಿಂತ ಆಧುನಿಕ ವಚನಗಳು ಯಾವ ರೀತಿಯಿಂದ ಭಿನ್ನ ? ಆಧುನಿಕ ವಚನಗಳ ಸ್ವರೂಪವನ್ನು ನಿರ್ಣಯಿಸುವ ಸಮಕಾಲೀನ ಅಂಶಗಳಾವುವು ? ಇತ್ಯಾದಿ ಪ್ರಶ್ನೆಗಳನ್ನು ನಂತರದ ಅಧ್ಯಾಯಗಳಲ್ಲಿ ವಿಸ್ತೃತ ವಿವೇಚನೆಗೆ ಒಳಪಡಿಸಿದ್ದಾರೆ. ಅದಕ್ಕೆ ಪೂರ್ವಭಾವಿಯಾಗಿ ಈ ಪ್ರಶ್ನೆಗಳಿಗೆ ಪ್ರಧಾನ ಆಶಯಗಳಿಗೆ ವಿವೇಚನೆ ಒದಗಿಸುವ ಕೆಲಸ ಈ ಅಧ್ಯಾಯದಲ್ಲಿ ಮಾಡಿದ್ದಾರೆ.

ಮೂರನೇ ಆಧ್ಯಾಯದಲ್ಲಿ ಇಪ್ಪತ್ತನೇ ಶತಮಾನದ ವಚನ ಸಾಹಿತ್ಯದ ಆಶಯಗಳ ಬಗ್ಗೆ ವಿಶ್ಲೇಷಣೆ ಇದೆ. ಉಪ ಅಧ್ಯಾಯಗಳಿದ್ದು ಮೊದಲ ಉಪ ಅಧ್ಯಾಯವು ಧಾರ್ಮಿಕ ಆಶಯವನ್ನು ವಿವರಿಸುತ್ತದೆ. 20ನೇ ಶತಮಾನದ ವಚನಗಳು ಇಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ಆಶೋತ್ತರಗಳ ಹಿನ್ನೆಲೆಯಲ್ಲಿ ವಿವೇಚಿಸಲ್ಪಟ್ಟಿವೆ. ಮಾನವ ಕೇಂದ್ರಿತ ವ್ಯಕ್ತೀಕರಣವು ಆಧುನಿಕ ಭಾರತದ ಧಾರ್ಮಿಕ ಆಶಯವನ್ನು ರೂಪಿಸಿರುವ ಬಗೆ ವಿಶಿಷ್ಟವಾದುದು. ಧರ್ಮಕೇಂದ್ರಿತ ಯುಗದ ಶರಣರು, ದಾಸರು ಮುಂತಾದ ಸಾಧಕರಿಗೆ ಪರಮಾತ್ಮನೆಂಬ ಸಂಕೇತವು ಅವರ ಎಲ್ಲ ಮಾನಸಿಕ ದುಗುಡಗಳಿಗೆ ಪರಿಹಾರ ರೂಪಿಸಿ ಉತ್ತರವಾಗಿ ಪರಿಣಮಿಸುತ್ತದೆ ಎಂಬ ವಿಷಯವನ್ನು ಶಂಕರ ಮೊಕಾಶಿ ಪುಣೇಕರರು ಹೇಳಿದ್ದಾರೆ. ಧರ್ಮಯುಗ ಮುಗಿದ ನಂತರದ ಹಂತದಲ್ಲಿ ನಾವು ಮಾನಸಿಕ ಸ್ತರದಲ್ಲಿ ಏರ್ಪಟ್ಟ ಮಾರ್ಪಾಡನ್ನು ಗಮನಿಸಬಹುದು. ತನ್ನ ಭಾವನೆಗಳು, ಮನಸ್ಸು, ಆತ್ಮ ಇತ್ಯಾದಿಯಾಗಿ ವ್ಯಕ್ತಿ ಕೇಂದ್ರಿತ ಸ್ತರ ನೆಲೆಗೊಂಡ ಬಳಿಕ ಧಾರ್ಮಿಕ ಯುಗದ ಪರಿಹಾರ ರೂಪ ದೈವವೆಂಬ ಸಂಕೇತ ಮೊದಲಿನ ಗುರುತ್ವವನ್ನು ಕಳೆದುಕೊಳ್ಳತೊಡಗಿತು. 'ಅಂತರಾತ್ಮ' ಎಂಬ ಹೊಸ ಪರಿಕಲ್ಪನೆ ಮೂಡಿಬಂತು. ಒಂದು ಕಾಲಕ್ಕೆ ಭಕ್ತನಿದ್ದವನು ಇದೀಗ ಭಾವಜೀವಿಯಾಗುತ್ತಾನೆ. ಆಧುನಿಕ ಭಾರತದ ದಾರ್ಶನಿಕರಾದ ರವೀಂದ್ರ, ಅರವಿಂದರು ಸ್ವತಃ ಕವಿಗಳೂ ಆಗಿದ್ದರು. ದಿವಾಕರ 'ಅಂತರಾತ್ಮ'ನಿಗೆ, 'ವಿಶ್ವಾತ್ಮನಿಗೆ' ವಚನ ಸಂಗ್ರಹಗಳ ಮೇಲೆ ಟಾಗೋರರ ಪ್ರಭಾವವಿದೆ. ಈ ಹಿನ್ನಲೆಯಲ್ಲಿ ಕುವೆಂಪುರವರ 'ಕಿಂಕಿಣಿ' ಆನಂದರ 'ಪಕ್ಷಿಗಾನ' ಭಟ್ ಡಿ ವಾಮನ್ ಅವರ 'ಹೊನ್ನ ನಿಮಿಷ' ಕಲ್ಯಾಣ ಸುಂದರರ 'ಎದೆಯ ಮಿಡಿದಾಗ' ಮುಂತಾದ ರಚನೆಗಳು ಪ್ರಕೃತಿಯ ಸಹಜ ಸೌಂದರ್ಯದ ಹಿನ್ನೆಲೆಯಲ್ಲಿ ರಚನೆಗೊಂಡ ವಚನಗಳಾಗಿವೆ.

ಕಾವ್ಯಯೋಗದ ಈ ಅನುಭವವನ್ನು ದಿವಾಕರರು "ವಿಶ್ವ ನಾಟಕದ ಅಂತರಂಗವೆಲ್ಲ ತಿಳಿದು ಅತ್ಯಂತ ಸಮಾಧಾನವಾಗುವುದು, ಕೃತಾರ್ಥತೆಯ ಛಾಯೆ ತೋರಿ ಧನ್ಯಭಾವದ ಅನುಭವವಾಗುವುದು." ಎನ್ನುತ್ತಾರೆ. ತಮ್ಮ 'ಅಂತರಾತ್ಮನಿಗೆ' ವಚನಗಳಲ್ಲಿ ಜೀವ–ದೇವರ ಸಂಬಂಧವನ್ನು, ಅದರ ರಹಸ್ಯವನ್ನು ಹುಡುಕುವಾಗ ಆಡಿದ 'ಒಡನುಡಿಗಳು'. ಈ ಸಂಬಂಧದ ಹುಡುಕಾಟದಲ್ಲೆ ಜೀವನವೆಂಬುದು ರಸಗೆಡದಂತೆ ಅಖಂಡವಾಗಿ ಪರಿಣಮಿಸಬಲ್ಲದು ಎಂಬ ಭಾವನೆ ದಿವಾಕರದು. ದಿವಾಕರರ ವಚನಗಳಲ್ಲಿನ ಸ್ವರೂಪವನ್ನು ಬಹಳ ವಿಸ್ತೃತವಾಗಿ ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ, ನಂತರದಲ್ಲಿ ಕುವೆಂಪುರವರ 'ಕಿಂಕಿಣಿ' ಯ ವಚನಗಳಲ್ಲಿನ ಶೈಲಿಯನ್ನು ವಿಶ್ಲೇಷಿಸುವ ಕೆಲಸವನ್ನು ಮಾಡಿದ್ದಾರೆ. ಕಿಂಕಿಣಿಯ ವಚನಗಳು ಶೈಲಿಯಲ್ಲಿಯೂ ಆಶಯದಲ್ಲಿಯೂ ಠಾಕೂರರ 'ಗೀತಾಂಜಲಿ'ಯ ರಚನೆಗಳಿಗೆ ಹತ್ತಿರವಾಗಿರುವದನ್ನು ವಿವಿಧ ಉದಾಹರಣೆಗಳೊಂದಿಗೆ ಸಾದರಪಡಿಸುತ್ತಾರೆ. ಈ ತಾತ್ವಿಕತೆಯ ಆಧಾರದಿಂದಲೇ ನಿಸರ್ಗದ ನಿಗೂಢವೆನಿಸುವ ಶಕ್ತಿಯನ್ನರಿಯಲು ತೊಡಗುತ್ತವಲ್ಲದೆ ಅದನ್ನು ರಸದೃಷ್ಟಿಯಿಂದ ಪರಿಭಾವಿಸಲು ತಕ್ಕ ವೇದಿಕೆಯನ್ನೂ ರೂಪಿಸಿಕೊಳ್ಳುತ್ತವೆ. ಕಿಂಕಿಣಿಯ ಹಲವಾರು ವಚನಗಳನ್ನು ನಿಸರ್ಗ ಸೌಂದರ್ಯದ ಆಸ್ವಾದನೆ, ಮಾನವ ಪ್ರೇಮವನ್ನು ವ್ಯಕ್ತಪಡಿಸುವ, ದೈವ ಪ್ರೇಮದ, ದೀನದಲಿತರ ಅಳು, ಪ್ರೇಮ, ಸ್ನೇಹದ ಹಿನ್ನೆಲೆಯಲ್ಲಿ ವಿಶ್ಲೇಸಿದ್ದಾರೆ. ತದನಂತರದಲ್ಲಿ ವಾಮನ್ ಅವರ 'ಹೊನ್ನ ನಿಮಿಷ' ಈ ಕೃತಿಯಲ್ಲಿನ ವಚನಗಳನ್ನು ವಿಶ್ಲೇಸಿದ್ದಾರೆ. 'ಕಿಂಕಿಣಿ, 'ಅಂತರಾತ್ಮನಿಗೆ' ಮುಂತಾದ ವಚನಸಂಗ್ರಹಗಳ ಚೌಕಟ್ಟಿನಲ್ಲಿ ವ್ಯಕ್ತಿಕೇಂದ್ರಿತ ಆಶಯಗಳಿಗನುಗುಣವಾಗಿ ರಚಿತಗೊಂಡ ವಚನಗಳು ಮ.ಶ್ರೀ.ದೇಶಪಾಂಡೆಯವರ 'ಅಕ್ಕರದ ಅಂಜಲಿಗಳು' ಕೃತಿಯಲ್ಲಿವೆ. ಬೇಂದ್ರೆಯವರ 'ಉಯ್ಯಾಲೆ' 'ಕರುಳಿನ ವಚನಗಳು' ಇಲ್ಲಿ ಲೌಕಿಕದ ಕೌಟುಂಬಿಕ ಆವರಣದಲ್ಲಿ ಅರಳಬಹುದಾದ ಶಿಶುಪ್ರೇಮವು ವಾತ್ಸಲ್ಯರಸವಾಗಿ ಪರಿಣಮಿಸಿದುದರ ನಿದರ್ಶನಗಳನ್ನು ಈ ಅಧ್ಯಾಯದಲ್ಲಿ ವಿವರಿಸದ್ದಾರೆ, ಸಿಪಿಕೆಯವರ 'ಅಂತರತಮ' ವಚನಗಳನ್ನು ವಿವಿಧ ಆಶಯಗಳ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಸಿಪಿಕೆಯವರ ಶರಣರ ಮಾದರಿಯಲ್ಲಿ ಅಂಕಿತವನ್ನು ಇಡಲು ಒಪ್ಪುವುದಿಲ್ಲ. ಮುಂದೆ ಎಸ್.ವಿ.ರಂಗಣ್ಣನವರ 'ರಂಗ ಭಿನ್ನಪ'ದಲ್ಲಿನ ವಚನಗಳನ್ನು, ಪರಮೇಶ್ವರಭಟ್ಟರ 'ಉಂಬರ' 'ಉಪ್ಪು ಕಡಲು' 'ಪಾಮರ'ಗಳಲ್ಲಿನ ವಚನಗಳನ್ನು, ಸಿದ್ದಯ್ಯ ಪುರಾಣಿಕರ 'ವಚನೋದ್ಯಾನ'ದಲ್ಲಿನ ವಚನಗಳನ್ನು ವಿಶ್ಲೇಸಿದ ನಂತರ ಜಚನಿಯವರ 'ವಚನ'ಗಳನ್ನು ವಿಶ್ಲೇಸಿದ್ದಾರೆ.

ಉಪ ಅಧ್ಯಾಯ –2 ಇದು ಸಾಮಾಜಿಕ ಆಶಯವನ್ನು ವಿವರಿಸುತ್ತದೆ. ಈ ಉಪ ಅಧ್ಯಾಯದಲ್ಲಿ 12ನೇ ಶತಮಾನದ ಶರಣರ ವಚನಗಳು ನೇರವಾಗಿ ಪ್ರಭುತ್ವಶಾಹಿ ವ್ಯವಸ್ಥೆಯನ್ನು ವಿರೋಧಿಸಲಿಲ್ಲ. ಆದರೂ ವ್ಯವಸ್ಥೆಯನ್ನು ಕುರಿತ ಪ್ರತಿಭಟನೆಯ ನೆಲೆ ಭಕ್ತಿ ಮಾರ್ಗವಾದ್ದುದುದರಿಂದ, ತಮ್ಮದೇ ಆಧ ಸೈದ್ಧಾಂತಿಕ ಚೌಕಟ್ಟನ್ನು ಪರಸ್ಪರ ಭ್ರಾತೃಭಾವ, ವೈಯಕ್ತಿಕಶೀಲ, ನೈತಿಕತೆ ಇವುಗಳನ್ನೇ ಮುಖ್ಯ ಆಶಯಗಳನ್ನಾಗಿಟ್ಟುಕೊಂಡಿವೆ. ಆಧುನಿಕ ವಚನಗಳನ್ನು ಈ ಹಿನ್ನೆಲೆಯಲ್ಲಿ

ಕುವೆಂಪುರವರ 'ಆವಿನಾ' ವಚನವನ್ನು, ರಂಗಣ್ಣನವರ ರಂಗಭಿನ್ನಪ, ಅಂತರತಮ ಕೃತಿಯಲ್ಲಿನ ವಚನಗಳನ್ನು, ನವನೀತ, ದೇವಬಿನ್ನಪ, ವಚನೋದ್ಯಾನ, ತುಂತುರು, ಪಾಮರ, ಯುಗವಚನ, ಕ್ರಾಂತಿಕಾಮನ ವಚನಗಳು, ಗವಿಯ ಹೊಂಬೆಳಕು, ಉಂಬರ, ಕಟ್ಟೆಯ ಬಸವೇಶ್ವರನ ವಚನಗಳು, ಅನಗ್ರಹ, ಅಮಲಿನ ವಚನಗಳು, ಸೊಗವಚನ, ಮುಂತಾದ ಕೃತಿಗಳಲ್ಲಿನ ವಚನಗಳನ್ನು ಸಾಮಾಜಿಕ ನ್ಯಾಯ ದೊರಕದ ಬಡವರು, ಅಸ್ಪೃಶ್ಯರು, ಕಾರ್ಮಿಕರು ಇವರ ಸ್ಥಿತಿಗತಿಗಳ ಬಗೆಗೆ ಮಾನವೀಯ ಅನುಕಂಪವನ್ನು ಉಕ್ಕಿಸಬಲ್ಲ ವಿಶ್ಲೇಷಣೆಯನ್ನು ಮಾಡಿದ್ದಾರೆ. ಬಡತನಕ್ಕೆ ಪರಿಹಾರ, ಬಡವ – ಧನಿಕರ ನಡುವಣ ವಿಷಮತೆಯನ್ನು ಆಧುನಿಕ ವಚನಗಳು ಸಮರ್ಪಕವಾಗಿ ಗುರುತಿಸುವುದನ್ನು ನಾವು ನೋಡಬಹುದಾಗಿದೆ. ಜಾತಿಯ ಬಗೆಗಿನ ಇಬ್ಬಂದಿತನವನ್ನೂ, ಅದರ ಬಗ್ಗೆ ಸಿಟ್ಟು, ಆಕ್ರೋಶವನ್ನು ವ್ಯಕ್ತ ಪಡಿಸುವ ವಚನಗಳನ್ನು ವಿಶ್ಲೇಷಿಸಿದ್ದಾರೆ. ಸಮಾಜದಲ್ಲಿರುವ ಹೆಣ್ಣಿಗಿರುವ ಸ್ಥಾನಮಾನವನ್ನು 'ಆಧುನಿಕ ವಚನಕಾರರು ವೈವಿಧ್ಯಮಯವಾಗಿ ಪ್ರಸ್ತಾಪಿಸಿದ್ದಾರೆ. ಸಮಾಜದಲ್ಲಿನ ನಿರುದ್ಯೋಗ ಸಮಸ್ಯೆಯ ಬಗ್ಗೆ ವಚನ ಚಂದ್ರಿಕೆ'ಯಲ್ಲಿ ಟೀಕಿಸಿರುವುದನ್ನು ವಿವರಿದ್ದಾರೆ. ಇಷ್ಟಲ್ಲದೆ ವಿದ್ಯಾವಂತಿಕೆಯ ದುರಹಂಕಾರ, ಯಾಂತ್ರೀಕೃತ ನಾಗರೀಕತೆಯ ಬಗೆಗೆ ಒಂದು ರೀತಿಯ ಅಸಹನೆ ಕಂಡುಬರುತ್ತದೆ. ಇದನ್ನು ಕೆ.ಅನಂತರಾಮು ಅವರು ತಮ್ಮ 'ದೇವ, ಬಿನ್ನಪ'ದಲ್ಲಿ ಹೇಳುತ್ತಾರೆ. ಯಾಂತ್ರಿಕತೆಯ ಬದುಕಿನಲ್ಲಿ ಬದುಕಿನ ಒಳ್ಳೆಯ ಮೌಲ್ಯಗಳ ಹುಡುಕುವುದು ಪ್ರಯಾಸಕರ ಎನ್ನುವುದು ಭಟ್ಟರ 'ಉಪ್ಪು ಕಡಲಿ' ನಲ್ಲಿ ನಮಗೆ ಸಿಕ್ಕುತ್ತದೆ. ಯಾವುದೇ ರೀತಿಯ ಜನಹಿತ ಧೋರಣೆಯಿಲ್ಲದ ಸರ್ಕಾರದ ಚಿತ್ರವನ್ನು ಅದರ ಅಧಿಕಾರವರ್ಗದ ರೀತಿನೀತಿಗಳ ಚಿತ್ರಣವು ಕೂಡ ಆಧುನಿಕ ವಚನಗಳಲ್ಲಿ ಬರುತ್ತದೆ. ಇದಕ್ಕೆ ಉದಾಹರಣೆಗೆ ರಂಗಬಿನ್ನಪ ಕನ್ಯೆಯರನ್ನು ಅರ್ಧಾಂಗಿಯರನ್ನು ಎನ್ನುವ ವಚನವನ್ನು ನೋಡಬಹುದು. ದೇಶದ ಆಡಳಿತ ವಿಧಾನವನ್ನು, ದಲಿತ ಬಡವರ ಸ್ಥಿತಿಗೆ ಕಾರಣವಾದ ಶೋಷಕ ಶಕ್ತಿಗಳನ್ನು ಆಧುನಿಕ ವಚನಕಾರರು ದೂಷಿಸಿದ್ದಾರೆ, ಟೀಕಿಸಿದ್ದಾರೆ. ಇಲ್ಲಿ ವ್ಯಂಗ್ಯ ವಿಷಾದಗಳ ಮಿಶ್ರಣವಿದೆ. ಸಾಮಾಜಿಕ ಪ್ರಜ್ಞೆಯ ಅಭಿವ್ಯಕ್ತಿಯನ್ನೇ ಪ್ರಧಾನವಗಿಟ್ಟುಕೊಂಡು ಬಹಳಷ್ಟು ವಚನಗಳು ರಚನೆಯಾಗಿವೆ. ಇದರ ವಿಶ್ಲೇಷಣೆಯೂ ಈ ಅಧ್ಯಾಯದಲ್ಲಿದೆ. ಆಧ್ಯಾಯ ನಾಲ್ಕರಲ್ಲಿ 'ಇಪ್ಪತ್ತನೇ ಶತಮಾನದ ವಚನಗಳ ರಚನಾ ವಿನ್ಯಾಸ'ವನ್ನು ವಿವರಿಸದ್ದಾರೆ. ಈ ಆಧ್ಯಾಯವನ್ನು ಈ ಕೆಳಗಿನಂತೆ ವಿಭಜಿಸಿದ್ದಾರೆ.

ಭಾಗ: ಒಂದು – ವಚನಗಳ ರಚನಾ ವಿನ್ಯಾಸದ ಹಿನ್ನೆಲೆ

ಭಾಗ: ಎರಡು– ಸಾಂಪ್ರದಾಯಿಕ ವಚನಗಳ ರಚನಾ ವಿನ್ಯಾಸ

ಭಾಗ: ಮೂರು – ಪ್ರಯೋಗಾತ್ಮಕ ವಚನಗಳ ರಚನಾ ವಿನ್ಯಾಸ

ಭಾಗ: ನಾಲ್ಕು – ಗದ್ಯಗೀತಾತ್ಮಕ ವಚನಗಳ ರಚನಾ ವಿನ್ಯಾಸ

ಈ ರೀತಿಯಾಗಿ ವಿಭಾಗಿಸಿಕೊಂಡು ಪ್ರಮುಖ ಆಧುನಿಕ ವಚನಕಾರರ ವಚನಗಳನ್ನು ಸವಿವರವಾಗಿ ವಿಶ್ಲೇಷಿದ್ದಾರೆ. ಪ್ರತಿ ಉಪ ಅಧ್ಯಾಯದಲ್ಲೂ ವಿವಿಧ ವಚನಕಾರರ ವಚನಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ವಿವರಣೆ ನೀಡಿದ್ದಾರೆ. ಆಧುನಿಕ ಪದ, ಪರಿಭಾಷೆಗಳ ಮೂಲಕ ವಲಯದ ಉಪಮೆ, ರೂಪಕಗಳನ್ನು ಕಟ್ಟಿಕೊಂಡಿರುವ ವಚನಗಳಿಗೆ ಉದಾಹರಣೆಗಳಿವೆ. ಕರ್ಮ, ವಿಧಿ ಇತ್ಯಾದಿ ಪರಿಕಲ್ಪನೆಗಳ ಬಗೆಗೆ ಕೂಡ ನೂತನವಾದ ಪರಿವೇಶವನ್ನು ನೀಡಿರುವ ವಚನಗಳಿವೆ ಅದಕ್ಕೆ ಉದಾಹರಣೆಯಾಗಿ ಸಿಪಿಕೆಯವರ ಪ್ರಕಾರ 'ಕರ್ಮ ಅಲಾರಂ ಗಡಿಯಾರದ ಹಾಗೆ' ಎನ್ನುವ ವಚನವನ್ನು ನೀಡುತ್ತಾರೆ.

ವಚನದ ನಿಲುಗಡೆಯ ಸಾಲುಗಳನ್ನು ಅವುಗಳ ಸಾರ್ಥಕ್ಯದ ದೃಷ್ಟಿಯಿಂದ ಮೂರು ರೀತಿಯಾಗಿ ಗುರುತಿಸಬಹುದು.

1. ವಚನದ ಮೊದಲ ಭಾಗದ ರೂಪತಾತ್ಮಕ ಉಪಮಾ ರೂಪದ ಅಭಿವ್ಯಕ್ತಿಯನ್ನು ನಿಲುಗಡೆಯಲ್ಲಿ ವಾಚ್ಯದ ನೆಲೆಗಿಳಿಸುವ ರೀತಿ

2. ಇಷ್ಟ ದೈವದ ಸಂಭೋಧನೆಯನ್ನು ಕೇಂದ್ರವಾಗಿಟ್ಟುಕೊಂಡು, ವಚನ ಭಾಗದ ರೂಪಕ, ಉಪಮಾ ವ್ಯವಸ್ಥೆಯನ್ನು ಯಾವ ನಿಲುಗಡೆಯ ವಿಚಾರದಿಂದ ಬಂಧಿಸದೇ ಇರುವುದು.

3. ಮೊದಲ ಭಾಗದ ವಚನದ ಸಾಲುಗಳಿಗೆ ಅವುಗಳ ವಿಚಾರದ ಸೌಂದರ್ಯದೊಂದಿಗೆ ಇನ್ನೂ ಹೆಚ್ಚಿನ ಅರ್ಥಸೌಂದರ್ಯವನ್ನು ನೀಡುವಲ್ಲಿ ನಿಲುಗಡೆಯ ಸಾಲುಗಳು ನೆರವಾಗಬಹುದು.

ಶರಣರ ವಚನಗಳಲ್ಲಿದ್ದಂತೆಯೇ ನಿರ್ದಿಷ್ಟ ಛಂದೋರೂಪವುಳ್ಳ ರಚನೆಯೇ ಪ್ರಯೋಗಾತ್ಮಕ ವಚನಗಳಲ್ಲೂ ಇರುವುದನ್ನು ಭಟ್ಟರ ಒಂದು ವಚನವನ್ನು ಉದಾಹರಣೆಯನ್ನು ನೀಡುವುದರ ಮೂಲಕ ಛಂದೋಲಯವನ್ನು ಗುರುತಿಸಿದ್ದಾರೆ. ಸಂಭಾಷಣೆ, ನಾಟು ನುಡಿ, ಅನ್ಯೋಕ್ತಿ, ಚಾಟೂಕ್ತಿ, ದೃಷ್ಟಾಂತ, ಕತೆಗಳನ್ನು ತಮ್ಮ ರಚನಾ ವಿನ್ಯಾಸದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಪ್ರಯೋಗಶೀಲತ್ವವನ್ನು ಪ್ರಕಟಿಸುತ್ತಾರೆ. ವಿಚಾರ ಪ್ರತಿಪಾನೆಯ ಉದ್ದೇಶವುಳ್ಳ ಬಹಳಷ್ಟು ವಚನಗಳು ದೀರ್ಘವಾಗಿರುವುದುಂಟು, ಇವೆಲ್ಲಾ ಛಂದೋಲಯವಾಗಲಿ, ಚೌಕಟ್ಟಾಗಲಿ ಸಾಧಿತವಾಗುವುದಿಲ್ಲ. ಇಂಥ ಸಂದರ್ಭದಲ್ಲಿ ವಾಕ್ಯಗಳು ಉದ್ದುದ್ದಕ್ಕೆ ಬೆಳೆಯುತ್ತ ಹೋಗಿರುವವುದುಂಟು, ಆದರೆ ವಿಚಾರವನ್ನು ಕೆಲವು ಘಟಕಗಳಾಗಿ ವಿಂಗಡಿಸಿಕೊಂಡು ರಚನೆಯಲ್ಲಿ ತೊಡಗುವ ಪರಿಯ ಒಂದು ರೀತಿಯ ಸಮತೂಕವನ್ನು ಇಂಥ ದೀರ್ಘಬಂಧಗಳಿಗೆ ತಂದುಕೊಡುತ್ತದೆ.

ಅಧ್ಯಾಯ ನಾಲ್ಕರಲ್ಲಿ ಗದ್ಯಗಿತಾತ್ಮಕ ವಚನಗಳ ರಚನಾವಿನ್ಯಾಸದಲ್ಲಿ ಬಹಳ ವಿಸ್ತೃತವಾಗಿ ವಿವರಿಸಿರುವರು.' ರಂಗಣ್ಣ, ಜಚನಿ, ಭಟ್ಟರು ಮೊದಲಾದ 'ರಚನೆ'ಗಳು ಹನ್ನೆರಡನೇ ಶತಮಾನದ ವಚನಗಳ 'ರಚನೆ'ಗೆ ಹತ್ತಿರವಾದವು. ಅಭಿವ್ಯಕ್ತಿಯ ವಿಧಾನದಲ್ಲಿ ತಾಂತ್ರಿಕ ಅಪೇಕ್ಷೆಗಳನ್ನು ಅವು ಈಡೇರಿಸುತ್ತವೆ. ಆರಾಧ್ಯ ಅಥವಾ ಸಾಂಕೇತಿಕ ಅಂಕಿತವೊಂದು ಸೇರಿಕೊಂಡು ಪ್ರಾಚೀನ ರಚನೆಯ ಮಾದರಿಗೆ ದೃಢತೆಯನ್ನು ತರುತ್ತದೆ. ಇಂಥ ರಚನೆಗಳನ್ನು ನಾವು 'ವಚನ' ಎಂದು ಕರೆಯುವ ಹಾಗೆ ಕುವೆಂಪು ಅವರ 'ಕಿಂಕಿಣಿ'ಯ ರಚನೆಯನ್ನಾಗಲೀ ಆನಂದರ 'ಪಕ್ಷಿಗಾನ'ದ ರಚನೆಗಳನ್ನಾಗಲೀ 'ವಚನ' ಗಳೆಂದು ಕರೆಯಲು ಬರುವುದಿಲ್ಲ. ಅವು 'ವಚನ ಕವನಗಳು' ಎಂದರೆ 'ಗದ್ಯಗೀತೆ'ಗಳು. ಕುವೆಂಪು, ತೀನಂಶ್ರೀ, ದಿವಾಕರ, ಸಿ.ಕೃಷ್ಣ, ಆನಂದ ಮುಂತಾದವರ ರಚನೆಗಳಲ್ಲಿ ಬೇಂದ್ರೆಯವರ ರಚನೆಗಳಲ್ಲಿ ಕಾಣುವಂತಹ ಪದ್ಯಶ್ರೇಣಿ ಕಂಡುಬರುವುದಿಲ್ಲ. ಇಲ್ಲೆಲ್ಲಾ ವಿಷಯಾನುಸಾರಿಯಾದ ವಾಕ್ಯವೃಂದದ ವಿಂಗಡಣೆಯೇ ಕಂಡುಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಕುವೆಂಪುರವರ 'ಕಿಂಕಿಣಿ', ಆನಂದರ 'ಪಕ್ಷಿಗಾನ', ಕಲ್ಯಾಣಸುಂದರರ' ಎದೆಯು ಮಿಡಿದಾಗ' ಕೃತಿಗಳಲ್ಲಿ ಕಾಣಬಹುದು. ವಾಕ್ಯ, ವಾಕ್ಯವೃಂದವನ್ನೊಳಗೊಂಡ ಪಾದರಚನೆಯು ಇಲ್ಲಿ ಸಮಾನಾಂತರ ವಾಕ್ಯರಚನಾವಿನ್ಯಾಸವನ್ನೇ ನಿಯತವಾಗಿ ಅನುಸರಿಸುವುದಿಲ್ಲ. ಇದಕ್ಕೆ ಉದಾಹರಣೆಯಾಗಿ 'ಎದೆಯು ಮಿಡಿದಾಗ' 'ಕಿಂಕಿಣಿ' 'ಪಕ್ಷಿಗಾನ' ಸಿಂಪಿ ಲಿಂಗಣ್ಣನವರ 'ಪ್ರಣಾಮ' 'ಸ್ಪರ್ಶ' ಇವುಗಳನ್ನು ನೀಡಿದ್ದಾರೆ. ಆನಂದರ 'ಪಕ್ಷಿಗಾನ'ದ 'ಮಿಣುಕು ಹುಳು' ರಚನೆಯು ಕಥನಾತ್ಮಕವಾಗಿರದೆ, ವರ್ಣನಾತ್ಮಕ ಕಾವ್ಯಮಯತೆಯನ್ನು ಪ್ರಧಾನವಾಗಿ ಹೊಂದಿದ ವಚನವಾಗಿದೆ. ಕರಳಿನ ವಚನಗಳಲ್ಲಿನ 'ಹಂಗು'. 'ಕಂಡೆ', 'ಅವರೇನು ಬಲ್ಲರು'? ವಚನಗಳಲ್ಲಿ ಭಾವತೀವ್ರತೆ ಒಳವಿದ್ಯುತ್‌ನಂತೆ ಹರಿಯುವುದನ್ನು ನಾವು ನೋಡಬಹುದು.

ಈ ನಿಬಂಧದ ಕೊನೆಯ ಅಧ್ಯಾಯದಲ್ಲಿ 'ಇಪ್ಪತ್ತನೇ ಶತಮಾನದ ವಚನಗಳ ನೆಲೆ–ಬೆಲೆ' ಯನ್ನು ಗುರ್ತಿಸಿದ್ದಾರೆ. ಬಿಡಿ ಬಿಡಿಯಾಗಿ, ಪ್ರಾಸಂಗಿಕವಾಗಿ ನಡೆದಿರಬಹುದಾದ ಆಧುನಿಕ ವಚನಗಳನ್ನು ಕುರಿತ ಚರ್ಚೆಯನ್ನು ಒಂದು ಕೇಂದ್ರಕ್ಕೆ ಅಳವಡಿಸಿಕೊಳ್ಳುವಲ್ಲಿ ಆ ಚರ್ಚೆಗಳ ನಡುವೆ ಪರಸ್ಪರ ಪೂರಕತೆಯನ್ನು ಕಲ್ಪಿಸುವ ಉದ್ದೇಶವನ್ನು ಇದು ಹೊಂದಿದೆ ಎಂಬ ಮಾತನ್ನು ಹೇಳುತ್ತಾರೆ. ಅಷ್ಟಲ್ಲದೆ ಈ ಚರ್ಚೆಗಳ ವಿಸ್ತರಣೆಗೆ ಅವಕಾಶವನ್ನು ನೀಡಿದ್ದಾರೆ. ಅದರ ಮೂಲಕ ಆಧುನಿಕ ವಚನಗಳ ಸಮಗ್ರ ಸಾಧನೆಯ ಒಟ್ಟು ನೋಟವನ್ನು ನೀಡಲು ಪ್ರಯತ್ನಮಾಡಲಾಗಿದೆ. ಆ ಪ್ರಯತ್ನದಲ್ಲಿ ನಿಬಂಧಕಾರರು ಯಶಗಳಿಸಿದ್ದಾರೆ. ಶರಣ ವಚನ ರಚನಾವಿನ್ಯಾಸದ ಮಾದರಿಯನ್ನು ಆಧುನಿಕರು ಪ್ರೇರಣೆಯನ್ನಾಗಿಕೊಳ್ಳುವಲ್ಲಿ ಏರ್ಪಟ್ಟ, ವೈವಿಧ್ಯ, ವೈಶಿಷ್ಟ್ಯಗಳು ಹೇಗೆ ಆಯಾ ವಚನಕಾರರ ವಚನ ರಚನಾ ವಿನ್ಯಾಸದ ವೈಯಕ್ತಿಕ ವೈಶಿಷ್ಟ್ಯಗಳಿಗೆ, ಇತಿ–ಮಿತಿಗಳಿಗೆ ಕಾರಣವಾಗಿದೆ ಎಂಬುದನ್ನು ಇಲ್ಲಿ ಪರಿಶೀಲಿಸಿದ್ದಾರೆ. ಇದರ ಮೂಲಕ ಕೇವಲ 'ಅನುಕರಣೆ'ಯ ನೆಲೆಗಿಂತ ಭಿನ್ನವಾದ ಪ್ರಯೋಗಶೀಲತ್ವ ಪ್ರಕಟವಾದ ಬಗೆಯನ್ನು ಇಲ್ಲಿ ಚರ್ಚಿಸಿದ್ದಾರೆ. ಬದಲಾದ ಯುಗಮನೋಧರ್ಮಕ್ಕೆ ಅನುಗುಣವಾಗಿ ವಚನರೂಪವು ವಿವಿಧ ಪ್ರಯೋಗಗಳಿಗೆ ಒಳಪಟ್ಟಿರುವುದನ್ನು ನಿಬಂಧಕಾರರು ಗುರ್ತಿಸಿ, ಅದರ ಅನಿವಾರ್ಯತೆಯನ್ನು

ತಮ್ಮ ನಿಬಂಧದಲ್ಲಿ ಅದನ್ನು ವಿವರಿಸದ್ದಾರೆ. ಆದ್ದರಿಂದ ಆಧುನಿಕ ವಚನಗಳಲ್ಲಿ ಗೀತೆ, ಕಥನ, ಹೇಳಿಕೆ, ಚಾಟೂಕ್ತಿ, ನಾಟು ನಡಿ, ಸಂಭಾಷಣೆ, ಶಬ್ದಚಮತ್ಕಾರ, ವಿಡಂಬನೆ, ಪರಿಹಾಸ ಹೀಗೆ ಹತ್ತು ಹಲವು ರೀತಿಯ ಅಭಿವ್ಯಕ್ತಿಯ ಬಣ್ಣಗಳಿರುವುದನ್ನು ನಿಬಂಧಕಾರರು ಪ್ರಸ್ತುತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಎಸ್.ವಿ.ರಂಗಣ್ಣನವರ 'ರಂಗ ಬಿನ್ನಪ'ಭಟ್ಟರ 'ಪಾಮರ' ಪುರಾಣಿಕರ 'ವಚನೋದ್ಯಾನ' ಗಳಲ್ಲದೆ ಅಂತರತಮ, ದೇವ ಬಿನ್ನಪ, ತುಂತುರು, ಅಮಲಿನ ವಚನಗಳು, ನವನೀತದಲ್ಲಿನ ವಚನಗಳನ್ನು ಉದಾಹರಣೆಯಾಗಿ ನೀಡುತ್ತಾರೆ. ಉಪಸಂಹಾರದಲ್ಲಿ ಆಧುನಿಕ ವಚನಗಳ ಚಾರಿತ್ರಿಕ ಮಹತ್ವವನ್ನು ಹೇಗೆ ಪಡೆಯುತ್ತವೆ ಎಂಬುದನ್ನು ತಿಳಿಸಿ ಅವರ ನಿಬಂಧವನ್ನು ಮುಕ್ತಾಯಗೊಳಿಸುತ್ತಾರೆ. ಅಂತಿಮವಾಗಿ ಅನುಬಂಧದಲ್ಲಿ ವಚನಕಾರರು, ಅವರ ವಚನ ಸಂಕಲನಗಳ ಪಟ್ಟಿಯನ್ನು ನೀಡಿದ್ದಾರೆ.ಸುಮಾರು 86ಕ್ಕೂ ಹೆಚ್ಚಿನ ಕೃತಿಗಳ ಮಾಹಿತಿಯು ನಮಗೆ ದೊರೆಯುತ್ತದೆ. ಪರಾಮರ್ಶನ ಗ್ರಂಥಗಳ ವಿವರ, ನಿಯತ ಕಾಲಿಕಗಳಲ್ಲಿ ಪ್ರಕಟಗೊಂಡ ವಚನಗಳು, ಅಪ್ರಕಟಿತ ವಚನ ಕೃತಿಗಳ ವಿವರ ಇದೆ.

ಒಟ್ಟಾರೆಯಾಗಿ ಅಲಕ್ಷಿತವಾಗಿದ್ದ ಆಧುನಿಕ ವಚನಗಳ ಬಗ್ಗೆ ಅಧ್ಯಯನ ಮಾಡುವ ಯಾವುದೇ ಸಂಶೋಧಕನಿಗೆ ಈ ಕೃತಿಯೂ ಒಂದು ರಹದಾರಿಯನ್ನು ನಿರ್ಮಿಸಿತು. ಕತ್ತಲಲ್ಲಿ ಪರಿತಪಿಸಿ, ದಾರಿ ಕಾಣದೆ ಇದ್ದವರಿಗೆ ಒಂದು ಸ್ಪಷ್ಟವಾದ ದಾರಿಯನ್ನು ಬೆಳಕನ್ನು ನೀಡಿದಂತಹ ಶ್ರೇಯಸ್ಸು ಈ ನಿಬಂಧಕಾರರಿಗೆ ಸಲ್ಲಬೇಕು. ಯಾವುದೇ ವ್ಯಕ್ತಿಯೂ ಆಧುನಿಕ ವಚನಗಳ ಅಧ್ಯಯನವನ್ನು ಮಾಡಲು ಇಚ್ಛಿಸಿದಾಗ ಈ ಕೃತಿಯ ಮೂಲಕವೇ ಪ್ರವೇಶವನ್ನು ಪಡೆಯಬೇಕು. ಸುಮಾರು 7 ದಶಕಗಳ ಕಾಲಘಟ್ಟದ ನಡುವೆ ಬರುವಂತಹ ಹಲವಾರು ಕವಿಗಳ ಆಧುನಿಕ ವಚನಗಳ ವಿವಿಧ ಕೃತಿಗಳಲ್ಲಿನ ವೈಶಿಷ್ಟ್ಯಗಳನ್ನು ವಿಶ್ಲೇಷುವ ಕೆಲಸವನ್ನು ನಿಬಂಧಕಾರರು ಮಾಡಿದ್ದಾರೆ. ಆ ಪ್ರಯತ್ನದಲ್ಲಿ ಅವರು ಯಶ ಕಂಡಿದ್ದಾರೆ. ಮುಂದೆ ಯಾವುದೇ ವ್ಯಕ್ತಿಯೂ ಆಧುನಿಕ ವಚನಗಳನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳಬೇಕೆಂದರೆ ಈ ಕೃತಿಯನ್ನು ಸಮಗ್ರವಾಗಿ ಅಧ್ಯಯನವನ್ನು ಮಾಡಿ ತನ್ನ ಮುಂದಿನ ಸಂಶೋಧನೆಯನ್ನು ಕೈಗೊಳ್ಳಬೇಕು, ಇಲ್ಲದಿದ್ದರೆ ಆತನ ಸಂಶೋಧನೆಯು ಅಪೂರ್ಣವಾಗುತ್ತದೆ ಎಂದು ನಿಸ್ಸಂಶಯವಾಗಿ ಹೇಳಬಹುದು. 20ನೇ ಶತಮಾನದ ಕಾಲಘಟ್ಟದಲ್ಲಿ ರಚನೆಯಾದ ಸಾಹಿತ್ಯ ಪ್ರಕಾರದಲ್ಲಿ ವಚನ ಸಾಹಿತ್ಯವು ಕೂಡ ಇದೆ ಎಂಬುದನ್ನು ಗುರುತಿಸಿ ಅದಕ್ಕೆ ಮೂರ್ತರೂಪವನ್ನು ಕೊಡುವಲ್ಲಿ ಈ ಸಂಶೋಧನಾ ಕೃತಿಯು ಯಶಸ್ಸನ್ನು ಪಡೆದುಕೊಂಡಿದೆ.

**ಹಣಮಂತ ಭೀಮಣ್ಣಾರವರು** ಪ್ರೊ.ಹೆಚ್.ಟಿ.ಪೋತೆಯವರ ಮಾರ್ಗದರ್ಶನದಲ್ಲಿ 2012 ರಲ್ಲಿ ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದಾಲಯ, ಕಲಬುರಗಿ ಇಲ್ಲಿಗೆ **"ಹೈದಾಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರು"** ಎನ್ನುವ ಸಂಶೋಧನಾ ಮಹಾಪ್ರಬಂಧವನ್ನು ರಚಿಸಿ ಸಲ್ಲಿಸಿದ್ದಾರೆ. ಸುಮಾರು 361 ಪುಟಗಳ ಈ ನಿಬಂಧವನ್ನು 6 ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡಿದ್ದಾರೆ. ಮೊದಲ ಅಧ್ಯಾಯ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಎರಡನೇ ಅಧ್ಯಾಯ ಆಧುನಿಕ ವಚನ ಸಾಹಿತ್ಯ ಪರಂಪರೆ, ಮೂರನೇ ಅಧ್ಯಾಯವು ಹೈದ್ರಾಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರು ಎಂಬುದಾಗಿದ್ದು ಇದು ಐದು ಉಪ ಅಧ್ಯಾಯಗಳನ್ನು ಒಳಗೊಂಡಿದೆ ಅವುಗಳು ಈ ಕೆಳಗಿನಂತಿವೆ

1. ಕೊಪ್ಪಳ ಜಿಲ್ಲೆಯ ಆಧುನಿಕ ವಚನಕಾರರು
2. ಗುಲಬರ್ಗಾ ಜಿಲ್ಲೆಯ ಆಧುನಿಕ ವಚನಕಾರರು
3. ಬೀದರ ಜಿಲ್ಲೆಯ ಆಧುನಿಕ ವಚನಕಾರರು
4. ಯಾದಗಿರಿ ಜಿಲ್ಲೆಯ ಆಧುನಿಕ ವಚನಕಾರರು
5. ರಾಯಚೂರು ಜಿಲ್ಲೆಯ ಆಧುನಿಕ ವಚನಕಾರರು

ಈ ಅಧ್ಯಾಯಗಳು ನಿಬಂಧದ ಮುಖ್ಯ ವಿಷಯಗಳಾಗಿವೆ. ನಂತರದಲ್ಲಿ ನಾಲ್ಕನೇ ಅಧ್ಯಾಯದಲ್ಲಿ ಆಧುನಿಕ ವಚನಕಾರರ ಆಶಯ ಹಾಗೂ ಆಕೃತಿಯ ವಿವರಣೆಯಿದೆ. ಐದನೆಯ ಅಧ್ಯಾಯದಲ್ಲಿ ಆಧುನಿಕ ವಚನಗಳ ವಸ್ತು,ಭಾಷೆ, ಶೈಲಿ ಮತ್ತು ತಂತ್ರ ಇದನ್ನು ಒಳಗೊಂಡಿದೆ ಕೊನೆಯ ಅಧ್ಯಾಯವು ಸಮಾರೋಪವಾಗಿದ್ದು ಅಂತಿಮವಾಗಿ ಅನುಬಂದಗಳನ್ನು ಸೇರಿಸಿದ್ದಾರೆ. ಇದೊಂದು ಉತ್ತಮ ನಿಬಂಧವಾಗಿದ್ದು ಹೈದ್ರಾಬಾದ ಕರ್ನಾಟಕದ ಆಧುನಿಕ ವಚನಕಾರರ ಬಗ್ಗೆ ವಿಸ್ತೃತವಾಗಿ ಮಾಹಿತಿಯನ್ನು ನೀಡುವಂತಹ ಕೃತಿಯಾಗಿದೆ. ಈ ನಿಬಂಧದ ಅದ್ಯಯನದ ಉದ್ದೇಶ ಮತ್ತು

ವ್ಯಾಪ್ತಿಯನ್ನು ಹೇಳುವಾಗ ಆಧುನಿಕ ವಚನ ಸಾಹಿತ್ಯಕ್ಕೆ ಹೈದ್ರಾಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರು ಸಾವಿರಾರು ವಚನಗಳನ್ನು ರಚಿಸಿ ಆಧುನಿಕ ವಚನ ಸಾಹಿತ್ಯದಲ್ಲಿ ಜಾತಿ, ಮತ, ಪಂಥಗಳೆಂಬ ಭೇಧವಿಲ್ಲದೆ ಸರ್ವತೋಮುಖವಾಗಿ ಬೆಳೆಯುತ್ತಿರುವುದನ್ನು ತಿಳಿಸಿದ್ದಾರೆ.

**ನಿಬಂಧದ ವ್ಯಾಪ್ತಿ**

ಅಧ್ಯಾಯ –2 ರಲ್ಲಿ ವಚನ ಸಾಹಿತ್ಯವನ್ನು ನಾಲ್ಕು ಯುಗಗಳಲ್ಲಿ ಗುರುತಿಸಿದ್ದಾರೆ

1)ಬಸವ ಪೂರ್ವಯುಗ 11ನೇ ಶತಮಾನ

2) ಬಸವಯುಗ 12–13 ನೇ ಶತಮಾನ

3)ಬಸವೋತ್ತರ 15–16ನೇ ಶತಮಾನ

4)ಆಧುನಿಕ ಯುಗ 20–21ನೇ ಶತಮಾನ.

ಈ ನಾಲ್ಕು ಯುಗಗಳಲ್ಲಿ ವಚನ ಸಾಹಿತ್ಯ ತುಂಬಾ ಸಮೃದ್ಧವಾಗಿ ಸೃಷ್ಟಿಗೊಂಡಿದೆ. ಇಲ್ಲಿ ಹರ್ಡೇಕರ್ ಮಂಜಪ್ಪ, ಜಚನಿ, ಮೂಜಗಂ, ಕಮಲಾ ಹಂಪನ ಮುಂತಾದವರನ್ನು ಹೆಸರಿಸಿರುವರು. ಅಧ್ಯಾಯ –3ರಲ್ಲಿ ಹೈದ್ರಾಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರು ಎಂಬುದರಲ್ಲಿ ಕರ್ನಾಟಕ ರಾಜ್ಯದಲ್ಲಿ ಅತಿ ಹಿಂದುಳಿದ ಪ್ರದೇಶವಾಗಿರುವ ಈ ಪ್ರದೇಶದಲ್ಲಿ ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳ ಸಾಮಾಜಿಕ, ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಮತ್ತು ರಾಜಕೀಯವಾಗಿ ಅದು ತನ್ನದೇ ಆದ ಪರಂಪರೆಯನ್ನು ಹೊಂದಿದ್ದಾವೆ ಎಂಬುದನ್ನು ತಿಳಿಸುತ್ತಾರೆ. ಇಲ್ಲಿನ ಜನರ ಜೀವನ ವಿಧಾನದ ಜೊತೆ ತಾಂಡವಾಡುತ್ತಿರುವ ಅಸಮಾನತೆಯನ್ನು ತಿಳಿಸಿರುವರು. ಈ ಐದು ಜಿಲ್ಲೆಗಳ ಸುಮಾರು 250 ಕ್ಕೂ ಹೆಚ್ಚಿರುವ ಆಧುನಿಕ ವಚನಕಾರರಲ್ಲಿ ಪ್ರಾತಿನಿಧಿಕವಾಗಿ ಯೋಗ್ಯರಾದ ವಚನಕಾರರ ವಚನಗಳನ್ನು ತೆಗೆದುಕೊಂಡಿದ್ದಾರೆ.

1. ಮೊದಲಿಗೆ ಕೊಪ್ಪಳ ಜಿಲ್ಲೆಯ ಆಧುನಿಕ ವಚನಕಾರರು ಇವರ ವಚನಗಳಲ್ಲಿನ ವಸ್ತು, ವಿಷಯವನ್ನು ತಿಳಿಸಿದ್ದಾರೆ ನಂತರದಲ್ಲಿ

2. ಗುಲಬರ್ಗಾ ಜಿಲ್ಲೆಯ ಆಧುನಿಕ ವಚನಕಾರರು ಇವರ ವಸ್ತು, ತಂತ್ರ, ಶೈಲಿ ಮತ್ತು ವಿಭಿನ್ನ ಆಶಯಗಳೊಂದಿಗೆ ಅವಲೋಕಿಸಿದ್ದಾರೆ.

3. ಬೀದರ ಜಿಲ್ಲೆಯ ಆಧುನಿಕ ವಚನಕಾರರು ಸುಮಾರು 50ಕ್ಕೂ ಅಧಿಕ ವಚನಕಾರರಿದ್ದಾರೆ.

4 ಯಾದಗಿರಿ ಜಿಲ್ಲೆಯ ಆಧುನಿಕ ವಚನಕಾರರು ಇಲ್ಲಿ ಕಡಿಮೆ ಜನ ವಚನಕಾರರು ಸಿಗುತ್ತಾರೆ. ಇವರ ವಚನಗಳಲ್ಲಿನ ಆಧ್ಯಾತ್ಮ, ಭಕ್ತಿ, ಸತಿಪತಿ ಭಾವಗಳನ್ನು ಹೊಂದಿರುವುದನ್ನು ಹೇಳಿದ್ದಾರೆ.

5. ರಾಯಚೂರು ಜಿಲ್ಲೆಯ ಆಧುನಿಕ ವಚನಕಾರರು ಈ ಜಿಲ್ಲೆಯ ವಿವಿಧ ವಚನಕಾರರನ್ನು ಹೆಸರಿಸಿದ್ದಾರೆ.

ಅಧ್ಯಾಯ –4ರಲ್ಲಿ ಆಧುನಿಕ ವಚನಕಾರರ ಆಶಯ ಹಾಗೂ ಆಕೃತಿಯೆಂಬ ಶೀರ್ಷಿಕೆಯನ್ನು ನೀಡಿದ್ದು ಎರಡು ಕಾಲಘಟ್ಟಗಳ ವಚನಗಳ ಆಶಯಗಳನ್ನು ವಿವರಿಸಿದ್ದಾರೆ. 5ನೇ ಅಧ್ಯಾಯದಲ್ಲಿ ಆಧುನಿಕ ವಚನಗಳ ವಸ್ತು, ಭಾಷೆ, ಶೈಲಿ ಮತ್ತು ತಂತ್ರ ಕುರಿತು ವಿವರಣೆ ನೀಡಿದ್ದಾರೆ. ಸಮಾಜದ ಎಲ್ಲ ವರ್ಗಗಳ ಪುರುಷ ಮತ್ತು ಮಹಿಳೆಯರ ಸಂಕೀರ್ಣ ಧ್ವನಿಗಳ ಚಿತ್ರಣ ವಚನ ಸಾಹಿತ್ಯದಲ್ಲಿ ಆಗಿರುವುದನ್ನು ಗುರುತಿಸಿದ್ದಾರೆ. ಸಮಾರೋಪವು ಕೊನೆಯ ಅಧ್ಯಾಯವಾಗಿದ್ದು ಇಲ್ಲಿ ತಮ್ಮ ನಿಬಂಧದ ಮೂಲ ಆಶಯದ ಸಾರಾಂಶವನ್ನು ಹೇಳಿದ್ದಾರೆ.

ಅಧ್ಯಾಯ –2 ಆಧುನಿಕ ವಚನ ಸಾಹಿತ್ಯ ಪರಂಪರೆ ಹೊಸಗನ್ನಡ ಸಾಹಿತ್ಯದಲ್ಲಿ ಆಧುನಿಕ ವಚನ ಸಾಹಿತ್ಯ ವಿಪುಲವಾಗಿ ಬೆಳೆದು ಬಂದಿದೆ. ನವೋದಯ ಸಾಹಿತ್ಯವು ಕನ್ನಡ ಸಾಹಿತ್ಯದ ಪರಂಪರೆಯಲ್ಲಿ ಪ್ರೇರಣೆ ಪಡೆದುದರಲ್ಲಿ ಶಿವಶರಣ ವಚನಗಳ ಪ್ರಭಾವ, ಪ್ರೇರಣೆ, ಆಕರ್ಷಣೆ ಪ್ರಮುಖವಾದವು. ನವೋದಯದ ಆಶಯಗಳಿಗೆ ತೀರಾ ಹತ್ತಿರವಾಗಿ ನಿಂತಿದ್ದರಿಂದಾಗಿ ಹೊಸಗನ್ನಡ ಯುಗದಲ್ಲಿ ನವೋದಯ ಕವಿಗಳು, ಸಾಹಿತ್ಯಿಕ, ಧಾರ್ಮಿಕ, ಸಾಂಸ್ಕೃತಿಕ ದೃಷ್ಟಿಯಿಂದ ವಚನ ರಚನೆಗೆ ಹೆಚ್ಚಿನ ಮಹತ್ವ ಕೊಟ್ಟರು. ಬಸವಾದಿ ಶರಣರ ವಚನ ಪರಂಪರೆಯು ಆಧುನಿಕ ವಚನಕಾರರ ಮೇಲೆ ಪ್ರಭಾವ ಬೀರಿತು. ಇದರಿಂದಾಗಿ ಆಧುನಿಕ ಯುಗದಲ್ಲಿಯೂ 'ವಚನ'ವೆಂಬ ಮಾಧ್ಯಮ ಬೆಳೆಯಲು ಕಾರಣವಾಯಿತು. ಎಂದು ಈ

ಅಧ್ಯಾಯದಲ್ಲಿ ಹೇಳಿರುವುದನ್ನು ನಾವು ಕಾಣಬಹುದಾಗಿದೆ. ಆಧುನಿಕ ವಚನಗಳು ಕನ್ನಡ ಸಾಹಿತ್ಯಕ್ಕೆ ವೈವಿಧ್ಯತೆಯನ್ನೂ, ಶ್ರೀಮಂತಿಕೆಯನ್ನು ತಂದುಕೊಟ್ಟುದಲ್ಲದೆ ಸಮಾಜದ ಸರ್ವತೋಮುಖ ದರ್ಶನವನ್ನು ಒಳಗೊಂಡಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾರೆ.

ಈ ಅಧ್ಯಾಯದಲ್ಲಿ ಪ್ರಮುಖ ವಚನಕಾರರಾದ 'ಕರ್ನಾಟಕದ ಗಾಂಧಿ' ಎಂದೇ ಖ್ಯಾತರಾದ ಹರ್ಡೇಕರ್ ಮಂಜಪ್ಪ, ಎಸ್.ವಿ.ರಂಗಣ್ಣ, ಎಸ್.ವಿ.ಪರಮೇಶ್ವರಭಟ್ಟ, ಡಾ.ಜ.ಚ.ನಿ, ಶ್ರೀ ಮೂಜಗಂ, ಮಹಾದೇವ ಬಣಕಾರ, ಕುವೆಂಪು, ದ.ರಾ.ಬೇಂದ್ರೆ, ಸಂಗಮೇಶ ಹೊಸಮನಿ, ಸಂಗಮೇಶ ಹಂಡಗಿ, ಪೂಜ್ಯ ಶ್ರೀ ಮ.ನಿ.ಪ್ರ.ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಕುಮಾರ ಕಕ್ಕಯ್ಯ ಚೋಳ, ಸಿ.ಪಿ.ಕೆ. ಕಮಲಾ ಹಂಪನಾ, ಶಿವಲಿಂಗಮ್ಮ ಕಟ್ಟಿ, ಇವರ ಪರಿಚಯವನ್ನು ಆಧುನಿಕ ವಚನಗಳ ಹಿನ್ನೆಲೆಯಲ್ಲಿ ಮಾಡಿಕೊಟ್ಟಿದ್ದಾರೆ ಅಷ್ಟಲ್ಲದೆ ಪ್ರತಿಯೊಬ್ಬರ ಆಧುನಿಕ ವಚನಗಳನ್ನು ಒಳಗೊಂಡಿರುವ ಕೃತಿಗಳ ಪರಿಚಯವನ್ನು ಈ ಅಧ್ಯಾಯದಲ್ಲಿ ಮಾಡಿದ್ದಾರೆ. ಪ್ರತಿಯೊಬ್ಬರ ಅಂಕಿತನಾಮಗಳನ್ನು ಪರಿಚಯಿಸಿದ್ದಾರೆ. ಪ್ರತಿಯೊಬ್ಬರ ಕೆಲವು ಆಧುನಿಕ ವಚನಗಳನ್ನು ಸಾಮಾಜಿಕ, ಆಧ್ಯಾತ್ಮಿಕ, ವೈಚಾರಿಕ ಚಿಂತನೆಗಳ, ಶಿವಾನುಭವ, ಲೋಕಾನುಭವ, ಧಾರ್ಮಿಕ, ಸಾಮಾಜಿಕ ವಿಡಂಬನೆ, ಅಂತರಂಗ ನಿವೇದನೆ, ಆತ್ಮ ಪರಶೀಲನೆ, ಪ್ರಕೃತಿ ಸೌಂದರ್ಯ, ವಾತ್ಸಲ್ಯ, ಸಮಾಜದಲ್ಲಿನ ಅಸಮಾನತೆ, ಅನ್ಯಾಯ, ಅಜ್ಞಾನ ಮುಂತಾದ ವಿಷಯಗಳ ಹಿನ್ನೆಲೆಯಲ್ಲಿ ಮೇಲ್ಕಂಡವರ ಪ್ರಮುಖ ವಚನಗಳನ್ನು ವಿಶ್ಲೇಷಿಸಿರುವುದನ್ನು ನಾವು ನೋಡಬಹುದಾಗಿದೆ.

ಅಧ್ಯಾಯ–3 ರಲ್ಲಿ ಹೈದ್ರಾಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರು ಎಂಬ ಶೀರ್ಷಿಕೆಯಡಿಯಲ್ಲಿ ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳು ಪ್ರಾಚೀನದಿಂದ ಇಲ್ಲಿಯವರೆಗೆ ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆಯನ್ನು ಮೊದಲಿಗೆ ಹೇಳಿದ್ದಾರೆ. ತದನಂತರ ಪ್ರತ್ಯಕವಾಗಿ ಆ ಪ್ರದೇಶದಲ್ಲಿನ ಜಿಲ್ಲೆಗಳಲ್ಲಿ ಬರುವ ಆಧುನಿಕ ವಚನಕಾರರನ್ನು ಪರಿಚಯಿಸುತ್ತಾರೆ. ಮೊದಲಿಗೆ ಕೊಪ್ಪಳ ಜಿಲ್ಲೆಯ ಆಧುನಿಕ ವಚನಕಾರರನ್ನು ಪರಿಚಯಿಸುತ್ತಾರೆ. ಇಲ್ಲಿಯ ಸಿದ್ದಯ್ಯ ಪುರಾಣಿಕ, ಅನ್ನದಾನಯ್ಯ ಪುರಾಣಿಕ, ಕೆ.ಬಿ,ಬ್ಯಾಳಿ, ಬಸವರಾಜ ಸಬರದ, ಗವಿಸಿದ್ದಪ್ಪ ಪಾಟೀಲ, ಶ್ರೀ ಸಿದ್ಧರಾಮ ಸ್ವಾಮಿ ಹಿರೇಮಠ ಮುಂತಾದವರ ಆಧುನಿಕ ವಚನಗಳನ್ನೊಳಗೊಂಡ ಕೃತಿಗಳು, ಅವರು ಅಂಕಿತನಾಮಗಳ ಪರಿಚಯದೊಂದಿಗೆ ಆಯ್ದ ಪ್ರಮುಖ ವಚನಗಳನ್ನು ಬೇರೆ ಬೇರೆ ನೆಲೆಯ ಹಿನ್ನೆಲೆಯಲ್ಲಿ ಕೆಲವು ವಚನಗಳನ್ನು ವಿಶ್ಲೇಷಿಸಿದ್ದಾರೆ. ನಂತರದಲ್ಲಿ ಗುಲಬರ್ಗಾ ಜಿಲ್ಲೆಯ ಆಧುನಿಕ ವಚನಕಾರಾದ ಪೂಜ್ಯ ಶರಣಬಸವಪ್ಪ ಅಪ್ಪ, ಚೆನ್ನಣ್ಣ ವಾಲೀಕಾರ, ಸರಸ್ವತಿ ಚಿಮ್ಮಲಗಿ, ಶೈಲಜಾ ಉಡಚಣ, ಶ್ರೀ ಸಿದ್ಧರಾಮ ಪೋಲೀಸ ಪಾಟೀಲ, ಎಸ್.ಎಸ್. ಪಾಟೀಲ, ಬಸವರಾಜ ವ್ಹಿ ಮೋದಿ, ನಾಗೇಂದ್ರ ಎಸ್.ಮಸೂತಿ, ಶ್ರೀ ಶಿವಕವಿ ಹಿರೇಮಠ ಜೋಗೂರ, ಶ್ರೀ ಗುರುಲಿಂಗಪ್ಪ ಹಾಲಹಳ್ಳಿ, ಶ್ರೀ ಹಣಮಂತರಾವ ವ್ಹಿ ಮೋತಕಪಳ್ಳಿ, ಇವರುಗಳ ಅಂಕಿತ ನಾಮ ಮತ್ತು ಆಯ್ದ ವಚನಗಳನ್ನು ವಿಶ್ಲೇಷಿಸಿದ್ದಾರೆ. ಬೀದರ ಜಿಲ್ಲೆಯ ಆಧುನಿಕ ವಚನಕಾರರಾದ ಶ್ರೀ ದೇಶಾಂತ ಹುಡುಗಿ, ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳು, ಶ್ರೀ ಬಿ.ಎಸ್.ಖೂಬಾ, ಶ್ರೀ ಎಮ್. ಜಿ. ಗಂಗನಹಳ್ಳಿ, ಶ್ರೀ ನಾಗಲಿಂಗ ಕವಿ, ಶ್ರೀ. ಎಮ್. ಜಿ.ದೇಶಪಾಂಡೆ, ಶ್ರೀಮತಿ ಕರುಣಾ ಸಲಗರ, ಶ್ರೀಮತಿ ದುಬಲಗುಂಡೆ, ಶ್ರೀ ಶಿವಸ್ವಾಮಿ ಚಿನಕೇರಾ ಮುಂತಾದವರ ಪರಿಚಯದೊಂದಿಗೆ ಅವರ ಕೆಲವು ವಚನಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಯಾದಗಿರಿ ಜಿಲ್ಲೆಯ ಆಧುನಿಕ ವಚನಕಾರರಲ್ಲಿ ಶ್ರೀಮತಿ ವಾಗ್ದೇವಿ ಪಾಟೀಲ, ದೊಡ್ಡ ಬಸಪ್ಪ ಬಳೂರಗಿ, ಬಸವರಾಜ ರುಮಾಲ, ಸೂಗಯ್ಯ ಹಿರೇಮಠ, ಅಬ್ದುಲ್ ಖರೀಮ್, ಶ್ರೀಮತಿ ವಿಶಾಲಾಕ್ಷಿ ಹಿರೇಮಠ ಇನ್ನೂ ಮುಂತಾದವರ ಆಧುನಿಕ ವಚನಗಳ ಅಂಕಿತನಾಮ, ಅವರ ಕೃತಿಗಳು, ಆಯ್ದ ವಚನಗಳ ವಿಶ್ಲೇಷಣೆಯನ್ನು ಮಾಡಿದ್ದಾರೆ. ರಾಯಚೂರು ಜಿಲ್ಲೆಯ ಆಧುನಿಕ ವಚನಕಾರರಲ್ಲಿ ಶ್ರೀ.ತಿಪ್ಪಣ್ಣ ಹೂಗಾರ, ಶ್ರೀ.ಶಿವಣ್ಣ ಹುಲ್ಲೂರ, ಶ್ರೀಮತಿ ಮಾಯಾದೇವಿ ಶರ್ಮ ಚಿರಂತಿಮಠ, ಶ್ರೀಮತಿ ಲಕ್ಷ್ಮೀದೇವಿಶಾಸ್ತ್ರಿ, ಶ್ರೀ ಬಿ. ಶೇಖರಪ್ಪ ಹುಲಿಗೇರಿ, ಶ್ರೀ.ಶರಭಪ್ಪ ಗುಡದಿನ್ನಿ, ಶ್ರೀ. ಅಮರೇಶ ಗುರಿಕಾರ, ಶ್ರೀ. ಅಮರಗುಂಡಪ್ಪ ಹೂಗಾರ, ಶ್ರೀಮತಿ ಪಿ. ಸಿದ್ದಲಿಂಗಮ್ಮ ಇನ್ನೂ ಮುಂತಾದ ವಚನಕಾರರ ಕೃತಿಗಳು, ಅವರ ಅಂಕಿತ ನಾಮಗಳನ್ನು ತಿಳಿಸಿಕೊಟ್ಟಿದ್ದಾರಲ್ಲದೆ ಅವರ ವಚನಗಳನ್ನು ಬಹಳ ವಿಸ್ತೃತವಾಗಿ ವಿವರಿಸಿರುವುದನ್ನು ನಾವು ನೋಡಬಹುದಾಗಿದೆ.

ಅಧ್ಯಾಯ–4 ರಲ್ಲಿ ಆಧುನಿಕ ವಚನಕಾರರ ಆಶಯ ಹಾಗೂ ಆಕೃತಿಯ ವಿವರಣೆಯಿದೆ ಆಧುನಿಕ ವಚನಗಳ ಜೀವಂತಿಕೆ ಲಕ್ಷಣ ಅದು ತನ್ನ ರೂಪದೊಂದಿಗೆ ಹೊಸ ಹೊಸ ಸಾಧ್ಯತೆಗಳನ್ನು ರೂಢಿಸಿಕೊಂಡು ಪ್ರಯೋಗಗೊಳ್ಳುತ್ತಿರುವುದು. ಜನ ಸಾಮಾನ್ಯರ ಭಾಷೆಯಲ್ಲಿಯೇ ಉಪಮೆ, ದೃಷ್ಟಾಂತ, ಗಾದೆ, ಒಗಟುಗಳನ್ನು ಬಳಸಿಕೊಂಡು ರಚಿಸಿದ್ದಾರೆ. ಆಧುನಿಕ ವಚನಕಾರರು ರಚಿಸಿದ ವಚನಗಳು ಪ್ರಸ್ತುತ ಸಾಮಾಜಿಕ, ಧಾರ್ಮಿಕ, ರಾಜಕೀಯ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಹೇಗೆ ಅರ್ಥೈಸಲ್ಪಡುತ್ತವೆಯೋ ಹಾಗೆಯೇ ಅವುಗಳ ಆಶೋತ್ತರಗಳ ಹಿನ್ನೆಲೆಯಲ್ಲಿ ವಿವೇಚಿಸಬೇಕಾಗುತ್ತದೆ. ಇಲ್ಲಿ ಧಾರ್ಮಿಕ ಆಶಯದ ಹಿನ್ನೆಲೆಯಲ್ಲಿ ರಚಿತವಾಗಿರುವ ವಚನಗಳನ್ನು ವಿವೇಚಿಸಿದ್ದಾರೆ. ತದನಂತರ ಸಾಮಾಜಿಕ ಆಶಯದ ವಚನಗಳ ಹಿನ್ನೆಲೆಯಲ್ಲಿ ವಿಜಯಶ್ರೀ ಸಬರದ ವಚನಗಳನ್ನು ವಿಶ್ಲೇಷಣೆಯನ್ನು ಮಾಡಿದ್ದಾರೆ. ಸಾಮಜದಲ್ಲಿನ ಸ್ನೇಹ, ಸತ್ಯ, ಸಹಕಾರ, ಭಾವೈಕ್ಯತೆಗಳನ್ನು ಜನರಲ್ಲಿ ಬಿತ್ತುವಂತಹ ವಚನಗಳನ್ನು ವಿಶ್ಲೇಷಸಿದ್ದಾರೆ, ಸಾಮಾಜಿಕ ಕಳಕಳಿ, ಆದರ್ಶದ ಕನಸುಗಳನ್ನು ಹೊಂದಿರುವ ಕೆಲವು ವಚನಗಳನ್ನು ನಮಗೆ ಪರಿಚಯಿಸಿದ್ದಾರೆ.

ಅಧ್ಯಾಯ–5 ರಲ್ಲಿ ಆಧುನಿಕ ವಚನಗಳ ವಸ್ತು, ಭಾಷೆ, ಶೈಲಿ ಮತ್ತು ತಂತ್ರಗಳನ್ನು ಒಳಗೊಂಡಿದೆ. ಈ ಸಾಹಿತ್ಯವು ಉದಯವಾದ ಕಾಲದಿಂದ ಪ್ರಾರಂಭವಾಗಿ ನಿರಂತರವಾಗಿ ಬೆಳೆಯುತ್ತಲೆ ಸಾಗುತ್ತಿದೆ. ಈ ವಚನ ಸಾಹಿತ್ಯ ಬೆಲೆಯಲು ಪ್ರೇರಕ ಶಕ್ತಿಯಾಗಿ ಪ್ರೋತ್ಸಾಹದಾಯಕವಾಗಿ ಬೆಳೆದು ಹರಿದುಬರುತ್ತಿರುವುದಕ್ಕೆ ಅಲ್ಲಿಯ ಪರಿಸರದ ಜನಸಾಮಾನ್ಯರ ಜೀವನ ಬಹಳ ಮುಖ್ಯವಾಗಿದೆ. ಎಲ್ಲ ಜನತೆಗೂ ಬೇಕಾಗುವ ಇಂಥ ಮೌಲ್ಯಕವಾದ ಎಷ್ಟೋ ನುಡಿಗಳನ್ನು, ನೀತಿ ಬೋಧನೆಗಳನ್ನು ನಿತ್ಯ ಜನರಾಡುವ ಭಾಷೆಯಲ್ಲಿಯೇ ವ್ಯಕ್ತವಾಗಿರುವುದು ವಚನ ಸಾಹಿತ್ಯದ ವೈಶಿಷ್ಟ್ಯವಾಗಿದೆ ಎಂದು ಹೇಳಿದ್ದಾರೆ. ವಸ್ತುವಿಗೆ ಸಂಬಂಧಿಸಿದಂತೆ ಹಲವಾರು ವಚನಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಅವುಗಳನ್ನು ವಿಶ್ಲೇಷಿಸುವ ಕೆಲಸ ಮಾಡಿದ್ದಾರೆ. ಹಣ, ಅದರ ಆಮಿಷ, ಅಧಿಕಾರದ ಹಂಬಲ, ಲೋಕದ ವ್ಯವಹಾರ ನೀತಿ, ಶಿಕ್ಷಣ, ಹದಗೆಟ್ಟ ರಾಜಕಾರಣ, ಧಾರ್ಮಿಕ ಮನೋಭಾವಗಳ ವಸ್ತುಗಳಿರುವ ವಚನಗಳನ್ನು ಗುರುತಿಸಿದ್ದಾರೆ.

ರಚನೆಯ ವಿನ್ಯಾಸ ವೈಶಿಷ್ಟ್ಯಗಳಲ್ಲಿ ಸಾಕಷ್ಟು ಭಿನ್ನತೆಯನ್ನು ಗುರುತಿಸಿದ್ದಾರೆ. ಚುನಾವಣೆ, ಮತದಾನ, ಬದಲಾದ ಸಂಸ್ಕೃತಿಯ ಚಿತ್ರಣವಿರುವ ವಚನಗಳಿವೆ, ಕುಟುಂಬದಲ್ಲಿನ ಹೆಣ್ಣುಮಕ್ಕಳ ವೈ ಮನಸ್ಸಿನ ಚಿತ್ರಣಗಳಿವೆ.

**ಭಾಷೆ**: ಸರಳವಾದ ದಿನನಿತ್ಯದ ವ್ಯವಹಾರಿಕ ಭಾಷೆಯನ್ನೇ ಬಳಸಿಕೊಂಡಿದ್ದಾರೆ. ದ್ವಂದ್ವಾರ್ಥಕ್ಕೆ ಅವಕಾಶ ನೀಡದೆ ನೇರ ಮತ್ತು ಸರಳವಾದ ಗತಿಯನ್ನು ಹೊಂದಿವೆ. ಅದಕ್ಕೆ ಪೂರಕವಾಗಿ ಬಹಳಷ್ಟು ವಚನಗಳನ್ನು ನಮಗೆ ಉದಾಹರಣೆಯಾಗಿ ನೀಡುತ್ತಾರೆ.

**ಶೈಲಿ :** ಆಧುನಿಕ ವಚನ ರಚನಾ ಶೈಲಿಯು ಪುರಾತನರಿಗಿಂತ ವಿಭಿನ್ನ ಮತ್ತು ವಿಚಿತ್ರವಾಗಿವೆ. ಆಧುನಿಕರ ಕೆಲವೊಂದು ವಚನಗಳು ಕವನದಂತೆ ಕೆಲವು ತ್ರಿಪದಿಯಂತೆ, ಹಲವು ದೀರ್ಘವಾದ ರಗಳೆಯಂತೆ, ಕಂದ ಪದ್ಯಗಳಂತೆ. ಷಟ್ಪದಿಯಂತೆ, ಭಕ್ತಿಗೀತೆಗಳಂತೆ, ಹಾಗೂ ಜನಪದ ಗೀತೆಗಳಂತೆ ಕಂಡು ಬಂದಿವೆ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿದ್ದಾರೆ.

**ತಂತ್ರ :** ವಚನ ಸಾಹಿತ್ಯವೇ ಒಂದು ವಿನೂತನ ಸಾಹಿತ್ಯ ಪ್ರಕಾರವಾಗಿ ಬೆಳೆದುಬಂದಿರುವುದು ಒಂದು ವಿಶೇಷತೆಯಾಗಿದೆ. ಇವು ಗದ್ಯಾತ್ಮಕವೆಂತಲೂ, ಪದ್ಯಾತ್ಮಕವೆಂತಲೂ ಇರುವ ಚರ್ಚೆಯನ್ನು ಮಾಡಿದ್ದಾರೆ. ಕವಿತೆ ಮತ್ತು ವಚನಗಳಲ್ಲಿಯ ಲಯವು ಅಸ್ತಿತ್ವದಲ್ಲಿರುವ ರೀತಿ ಭಿನ್ನವೆಂದು ಬಸವನಾಳರ ಸಹಮತವಾಗಿದೆ. ಕವಿತೆಯ ಲಯ, ಛಂದಸ್ಸನ್ನು ಆಶ್ರಯಿಸಿಯೂ ವಚನಗಳಲ್ಲಿನ ಲಯ ಒಂದೊಂದು ವಾಕ್ಯಗಳ ಅಂಗಂಗಳಲ್ಲಿ ತೋರುವ ತಂತ್ರಗಾರಿಕೆಯ ವ್ಯತ್ಯಾಸದಿಂದ ಆಧಾರಿತವರಂಬುದು ಅವರ ನಿಲುವು. ಲಯ ಮತ್ತು ಛಂದಸ್ಸುಗಳ ಬಗೆಗಿನ ಆಧುನಿಕ ಪರಿಕಲ್ಪನೆಗಳು ಬಸವನಾಳರ ನಿಲುವನ್ನು ಸಮರ್ಥಿಸುತ್ತವೆ. ಈ ರೀತಿಯ ಅಭಿಪ್ರಾಯವನ್ನು ಹೇಳಿದ್ದಾರೆ.

ಒಟ್ಟಾರೆಯಾಗಿ ಹೈದ್ರಾಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರ ಬಗ್ಗೆ ಪರಿಚಯ, ಅವರ ಕೃತಿಗಳು, ಅಂಕಿತನಾಮದ ಜೊತೆ ಅವರ ವಚನಗಳನ್ನು ವಿಶ್ಲೇಷಿಸಿದ್ದಾರೆ. ಇದೊಂದು ಉತ್ತಮ ನಿಬಂಧವಾಗಿದ್ದು ಹೈದ್ರಾಬಾದ ಕರ್ನಾಟಕದ ಆಧುನಿಕ ವಚನಕಾರರ ಬಗ್ಗೆ ಬಹಳ ವಿಸ್ತೃತವಾಗಿ ಅಧ್ಯಯನ ಮಾಡಲು ಇಚ್ಛಿಸುಂತಹ ಸಂಶೋಧಕರಿಗೆ,

ಅಧ್ಯಯನ ಆಸಕ್ತರಿಗೆ ಬಹಳ ಉತ್ತಮವಾದ ಮಾಹಿತಿಯನ್ನು ನೀಡುತ್ತದೆ. ನಿಬಂಧಕಾರರು ಸಮಗ್ರವಾಗಿ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಆಧುನಿಕ ವಚನಾಸಕ್ತ ಜನರಿಗೆ ನೀಡಿರುವುದರಿಂದ ಬಹಳ ಪರಿಶ್ರಮವಿರುವುದು ನಮಗೆ ಕಾಣುತ್ತದೆ, ಎಲ್ಲಿಯೂ ಯಾವ ವಿಷಯದಲ್ಲಿ ಗೊಂದಲಕ್ಕೆಡೆಮಾಡದೆ ಒಂದು ಉತ್ತಮವಾದ ನಿಬಂಧವನ್ನು ರಚಿಸಿದ್ದಾರೆ. ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳಲ್ಲಿನ ಆಧುನಿಕ ವಚನಕಾರರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಮಾಡುವವರಿಗೆ ಖಚಿತವಾದ ಮತ್ತು ಹೆಚ್ಚಿನ ಮಾಹಿತಿಯನ್ನು ನೀಡುವ ಕೃತಿಯಾಗಿದೆ ಎಂದು ಹೇಳಬಹುದಾಗಿದೆ.

**ಪರಾಮರ್ಶನ ಗ್ರಂಥಗಳು :**


- **ಇಪ್ಪತ್ತನೇ ಶತಮಾನದ ವಚನ ಸಾಹಿತ್ಯ ಒಂದು ಅಧ್ಯಯನ : ಡಾ. ಪ್ರೀತಿ ಶುಭಚಂದ್ರ**
- **ಹೈದಾಬಾದ ಕರ್ನಾಟಕದ ಪ್ರಾತಿನಿಧಿಕ ಆಧುನಿಕ ವಚನಕಾರರು : ಹಣಮಂತ ಭೀಮಣ್ಣಾ**
- **ಕರ್ನಾಟಕ ಸರ್ಕಾರ ಪ್ರಕಟಿಸಿದ ವಚನ ಸಂಪುಟಗಳು**
- **ಶರಣರ ಅನುಭಾವ ಸಾಹಿತ್ಯ : ಡಾ. ಹೆಚ್. ತಿಪ್ಪೇರುದ್ರಸ್ವಾಮಿ. ಪ್ರ: ಡಿ.ವಿ.ಕೆ.ಮೂರ್ತಿ.ಮೈಸೂರು 1991**
- **ಶರಣರ ಅನುಭವ,ಅನುಭಾವ, ಅನುಭೂತಿ : ಡಾ.ಆರ್.ಆರ್.ದಿವಾಕರ, ಪ್ರ: ಪ್ರಸರಾಂಗ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1973**